ಡಿಸೆಂಬರ್,
ರೂ. 4/-

# ತುಷಾರ

ನೆನಪು
ಸಿಪಿ ಕಪಿ
ಡಾ। ಸಿದ್ದಯ್ಯ ಪುರಾಣಿಕ



ತರಾಸು ಪ್ರಣಯ ಕಾದಂಬರಿ


## ಒಂದು ಗಂಡು ಎರಡು ಹೆಣ್ಣು

ವರ್ಷಾಂತ್ಯ ವಿಶೇಷಾಂಕ

ಸಂಪುಟ: 19 ಸಂಚಿಕೆ: 9

# ತುಷಾರ ಸಿಂಚನ

ಡಿಸೆಂಬರ್, 1991




ಕತೆಗಳು:

10 ಬೆಳೆ
★ ನಾ. ಡಿ'ಸೋಜ

32 ಕತ್ತಿಯ ಅಲಗು
★ 'ಮನು'

102 ಇಂಬಳ
★ ಕೆ. ವಿ. ವಿಜಯಲಕ್ಷ್ಮಿ





ತರಾಸು
ಪ್ರಣಯ ಕಾದಂಬರಿ
111 ಒಂದು ಗಂಡು—ಎರಡು ಹೆಣ್ಣು





ಖೋಕ್ ಕಾದಂಬರಿ

64 ಶ್ರೀದೇವಿ
★ 'ಸಮರ್ಪಿತಾ'

ಕೊನೆಯ ಕಂತು:
ಓದುಗರ ಬರಹ


ನಗೆಬರಹಗಳು

23 ನಾನು—ನಾಗಪ್ಪಣ್ಣ
★ ಅ. ಬಾಲಕೃಷ್ಣ ಶೆಟ್ಟಿ ಪೊಳಲಿ

42 ರಾಣ್ಣಿಯ ಹನಿಮೂನು
★ ಎಸ್. ಎನ್. ಶಿವಸ್ವಾಮಿ

ನೆನಪು
ಸಿಹಿ ಕಹಿ

87 ಕೊನೆಯುಸಿರೂ
ಕನ್ನಡ ದುಡಿಮೆಗೆ
★ ಡಾ। ಸಿದ್ದಯ್ಯ ಪುರಾಣಿಕ




ಬಾಲ ಪ್ರಪಂಚ

47—ಮಕ್ಕಳಿಗಾಗಿ ವಿಶೇಷ ಪುಟಗಳು—
★ ಡಾ। ಎಚ್. ಎಸ್.
ವೆಂಕಟೇಶಮೂರ್ತಿ
★ ಈಶ್ವರಚಂದ್ರ
★ ಎನ್ಕೆ
★ ಪ್ರೊ। ಜಿ. ವೆಂಕಟಸುಬ್ಬಯ್ಯ
★ 'ಸಿಸು' ಸಂಗಮೇಶ
ಅವರ ಬರಹಗಳು





ಭಾರತ ದರ್ಶನ

VISIT INDIA

70 ಸಂಭ್ರಮ ಉತ್ಸವಗಳ ನಾಡು
★ ಗೋಪಿ

ಅಸಮಿಯಾ ಕತೆ

76 ಓ! ಅಣ್ಣಾ... ಅಣ್ಣಾ
★ ಮೂಲ: ಹಲೀರಾಮ ಡೇಕಾ
ಅನುವಾದ: ಡಾ। ಪಂಚಾಕ್ಷರಿ
ಹಿರೇಮಠ





ಸ್ಥಿರಶೀರ್ಷಿಕೆಗಳು

20 ತುಣುಕು—ಮಿಣುಕು
62 ಬಹುಮಾನಿತ ಚಿತ್ರಕವನ
63 ಚಿತ್ರಕವನ ಸ್ಪರ್ಧೆ: 101
84 ಹಿರಿಯರ ಆಯ್ಕೆ ಕವನಗಳು
99 ವಿಚಾರಪತ್ರ
109 ನಿಮ್ಮ ತಾರಾಫಲ
158 ಮನಮುದ್ರೆ


ಕಲೆ: ಮೋನಪ್ಪ, ಶ್ಯಾಮ್, ಸಾವಿತ್ರಿ

ವಿನ್ಯಾಸ: ನಾಗರಾಜ್

ಮುಖಪುಟ ವರ್ಣಚಿತ್ರ:
ಕೆ. ಎನ್. ನಾಗೇಶ್‌ಕುಮಾರ್

ಕಾದಂಬರಿ ರೂಪದರ್ಶಿಗಳು:
ಶ್ರೀಧರ್—ಮಾಲಾಶ್ರೀ

ವಾರ್ಷಿಕ ಚಂದಾದರ: ರೂ. 50/-
(ಅಂಚೆ ವೆಚ್ಚ ಸೇರಿ)
ವಿವರಗಳಿಗೆ: ಪ್ರಸರಣಾಧಿಕಾರಿ, ತುಷಾರ
ಮಣಿಪಾಲ – 576 119

ನೆನಪು
ಸಿಹಿ ಕಹಿ

● ಡಾ। ಸಿದ್ದಯ್ಯ ಪುರಾಣಿಕ


'ಶ್ರೀಗಿರಿ',
4/5 ಎ, ಅಲಿ ಆಸ್ಕರ್ ರಸ್ತೆ,
ಬೆಂಗಳೂರು – 560 052.

# ಕೊನೆಯುಸಿರೂ ಕನ್ನಡ ದುಡಿಮೆಗೆ

**ನಾ**ನು 18-6-1918ರಂದು ಪವಿತ್ರಾತ್ಮರಾದ ಪಂಡಿತ ಕಲ್ಲಿನಾಥ ಶಾಸ್ತ್ರಿಗಳು ಮತ್ತು ದಾನ ಶೀಲೆ ದಾನಮ್ಮನವರ ಮಗನಾಗಿ ಹುಟ್ಟಿದೆ. ಇಂಥ ತಂದೆತಾಯಿಗಳನ್ನು ಪಡೆದುದು ಎಷ್ಟು ಸುದೈವವೋ ಅಷ್ಟೇ ದ್ಯಾಂಪುರವನ್ನು ಹುಟ್ಟೂರಾಗಿ ಪಡೆದುದು ಎಂದು ನಂಬಿದ್ದೇನೆ. ರಾಯ್ಚೂರು ಜಿಲ್ಲೆಯ ಯಲಬುರಗಿ ತಾಲೂಕಿನ ಈ ಸಣ್ಣ ಹಳ್ಳಿ ಆ ಸಾಲಾರಜಂಗ್ ಜಹಗೀರು ಪ್ರದೇಶದಲ್ಲಿ ಒಂದು ಒಯೇಸಿಸ್ ಇದ್ದಂತೆ ಇದ್ದಿತು. ಸುತ್ತಲಿನ ಹತ್ತಾರು ಹಳ್ಳಿಗಳಿಗೆ ಪ್ರಾಥಮಿಕ ಶಾಲೆಗಳ ಶಿಕ್ಷಕರನ್ನು ಒದಗಿಸಿದ್ದ ಹಿರಿಮೆ ಆ ಹಳ್ಳಿಯದು. ಅಜ್ಜಂದಿರಾದ ಚೆನ್ನಕವಿಗಳು, ತಂದೆ ಕಲ್ಲಿನಾಥ ಶಾಸ್ತ್ರಿಗಳು, ಸೋದರಮಾವ

ಫೋಟೋ: ಕೆ. ಎನ್. ನಾಗೇಶ್‌ಕುಮಾರ್

ಕಾಲಕಾಲೇಶ್ವರ ಶಾಸ್ತ್ರಿಗಳು, ಕವಿಗಳು; ಮಠದ ಮಹಾಲಿಂಗಯ್ಯನವರು, ಕಲ್ಲಿನಾಥ ವಿ. ಹಿರೇಮಠರು, ಜಂಗ್ಲಿ ಸಾಹೇಬರು, ಸಾಹಿತ್ಯ ವಿದ್ಯಾಥರರು, ಭಜನಾ ಮಂಡಳಿಯಲ್ಲಿ ನಿಜಗುಣ ಶಿವಯೋಗಿಗಳು, ಸರ್ಪಭೂಷಣ ಶಿವಯೋಗಿಗಳು, ಪುರಂದರದಾಸ–ಕನಕದಾಸರ, ಶಿಶುನಾಳ ಷರೀಫ ಸಾಹೇಬರ ಹಾಡುಗಬ್ಬಗಳನ್ನು ಮತ್ತು ಮೇಲ್ಕಾಣಿಸಿದ ಕವಿಗಳು ಬರೆದು ಕೊಟ್ಟ ಹಾಡುಗಳನ್ನು ಸುಶ್ರಾವ್ಯವಾಗಿ ಹಾಡುತ್ತಿದ್ದವರು ಪಲವು



**ಮುಂದಿನ ವರ್ಷ ಎಪ್ಪತ್ತೈದರ ಘಟ್ಟಕ್ಕೆ ಕಾಲಿರಿಸಲಿರುವ ಹಿರಿಯರಾದ 'ಕಾವ್ಯಾನಂದ'ರು ಕನ್ನಡಕ್ಕಾಗಿ, ಕನ್ನಡ ನಾಡಿಗಾಗಿ ತುಂಬಾ ಸೇವೆ ಮಾಡಿದವರು. ರಾಜ್ಯ ಸರ್ಕಾರದ ಅನೇಕ ಹಿರಿಯ ಹುದ್ದೆಗಳನ್ನು ಅಲಂಕರಿಸಿದ ಡಾ। ಪುರಾಣಿಕರು ಎಲ್ಲ ಘಟ್ಟದಲ್ಲೂ ಸಾಧನೆ ಕಂಡವರು.**

**1991ರಲ್ಲಿ ತುಷಾರ ಆರಂಭಿಸಿದ ಈ ನೆನಪು ಸಿಹಿ—ಕಹಿ ಮಾಲೆಯ ಮಂಗಳ ಬರೆಹವಾಗಿ 'ಕಾವ್ಯಾನಂದ'ರು ತಮ್ಮ ಈ ನೆನಪುಗಳನ್ನು ಸಂಕಲಿಸಿದ್ದಾರೆ.**

ಜನ! ಊರಿಗೆ ಊರೇ ಒಂದು ಕುಟುಂಬ; ಮನೆಯಲ್ಲಿ ಗರತಿಯರ ಕುಟ್ಟುವ, ಬೀಸುವ ಹಾಡುಗಳು, ಹೊಲಗಳಲ್ಲಿ ಬಿತ್ತುವ, ಒಕ್ಕುವ, ಹಂತಿಯ ಹಾಡುಗಳು; ಮಠ, ಚೆನ್ನಕವಿಗಳ ಮನೆಗಳಲ್ಲಿ ಶಾಸ್ತ್ರಾರ್ಥ ಚಿಂತನಗಳು, ಸಾಹಿತ್ಯ ಸಲ್ಲಾಪಗಳು ಇವುಗಳಿಂದ ನಾನು ಬಹಳಷ್ಟನ್ನು ಶ್ರವಣ ಮಾಧ್ಯಮದ ಮೂಲಕವೇ ಕಲಿತೆ.

ನನ್ನ ತಂದೆಯವರೇ ನನ್ನ ಮೊದಲ ಗುರು. ಅವರು ನನಗೆ ನುಡಿದು ಕಲಿಸಿದರು,. ನಡೆದು ಕಲಿಸಿದರು, ಪಟ್ಟು ಹಿಡಿದು ಕಲಿಸಿದರು. ವ್ಯಾಕರಣ, ಛಂದಸ್ಸು, ಕಾವ್ಯಗಳ ಪಾಠ, 'ಕರ್ನಾಟಕ ಶಬ್ದ ಮಂಜರಿ'ಯ ಕಂಠಪಾಠ, ಶರಣರ ಸಂತರ ಚರಿತ್ರೆಗಳ ಬೋಧೆ, ಪುರಾಣಗಳ ಕಥೆಗಳು—ಇನ್ನು ಏನೇನೋ! ಚಿಕ್ಕೇನ ಕೊಪ್ಪದಲ್ಲಿ ನನ್ನ ಸೋದರ ಮಾವನವರೇ ಶಾಲಾ ಗುರುಗಳು. ಅವರು ಮೂರು ವರ್ಷ ನನ್ನ ವಿದ್ಯಾಗುರುಗಳಾಗಿ, ಪಠ್ಯಪುಸ್ತಕಗಳಿಂದಾಚೆ ಕರೆದೊಯ್ದು ಬಹಳಷ್ಟು ಕಲಿಸಿದರು. ಆ ಊರಿನ ಜನರಿಂದಲೂ ಪ್ರೀತಿಯ ಪಾಠ ಕಲಿತೆ. ಮುಂದೆ ಮಾಧ್ಯಮಿಕ ಶಿಕ್ಷಣ ಮುಗಿವವರೆಗೆ ಕುಕ್ಕನೂರಿನ 'ವಿದ್ಯಾನಂದ ಗುರುಕುಲ'ದಲ್ಲಿ ವಿದ್ಯಾಭ್ಯಾಸದ ಮುಂದುವರಿಕೆ. ಆ ಕಾಲಕ್ಕೆ ಅದೊಂದೇ ರಾಷ್ಟ್ರೀಯ ಶಾಲೆ. ಅದರ ಸಂಸ್ಥಾಪಕರೂ ಮುಖ್ಯೋಪಾಧ್ಯಾಯರೂ ಆಗಿದ್ದ ದೇಶಭಕ್ತ ರಾ. ಭೀ. ದೇಸಾಯಿ ಅವರು ಉಜ್ವಲ ರಾಷ್ಟ್ರಾಭಿಮಾನಿಗಳು. ಅಲ್ಲಿ ಶಿಕ್ಷಕರೆಲ್ಲರೂ ದಕ್ಷರಾಗಿದ್ದರು. ಆದರೆ ನನ್ನ ಬದುಕಿನ ದಿಕ್ಕನ್ನೇ ಬದಲಿಸಿದವರು ಪೂಜ್ಯ ಪಾ.ಭೀ. ದೇಸಾಯಿಯವರು. ಮುಂದೆ ಸತ್ಕವಿ ಸಾಲಿ ರಾಮಚಂದ್ರರಾಯರ ಅಳಿಯಂದಿರಾಗಿ, ಬಹು ದೊಡ್ಡ ಇತಿಹಾಸಕಾರರಾಗಿ ಬೆಳಗಿದ ಅವರು ಆ ಹಂತದಲ್ಲಿ ನನ್ನ ವಿದ್ಯಾ ಗುರುಗಳಾಗಿದ್ದುದು ನನ್ನ ಅದೃಷ್ಟ. ಅಲ್ಲಿದ್ದ ಎಲ್ಲ ಪುಸ್ತಕಗಳನ್ನೂ ನನ್ನಿಂದ ಓದಿಸಿದರು; ಜ್ಞಾನದ ಹಸಿವೆಯನ್ನು ಹೆಚ್ಚಿಸಿದರು; ಇಂಗ್ಲಿಷ್, ಕನ್ನಡ, ಉರ್ದು, ಹಿಂದೀ ಭಾಷೆಗಳಲ್ಲಿ ಭದ್ರ ಬುನಾದಿಯನ್ನು ಹಾಕಿದರು. ಗುರುಕುಲದ ವಾರ್ಷಿಕೋತ್ಸವಗಳಿಗೆ ಆ ಕಾಲದ ಗಣ್ಯರೂ ಪಂಡಿತವರೇಣ್ಯರೂ ಬರುತ್ತಿದ್ದರು. ಕನ್ನಡ, ಹಿಂದಿ, ಉರ್ದು ಭಾಷೆಗಳ ಎಲ್ಲ ಪ್ರಮುಖ ಪತ್ರಿಕೆಗಳು ಬರುತ್ತಿದ್ದುವು. ನಾನು ನಿದ್ರೆ ನೀರಡಿಕೆಗಳ ಪರಿವೆವಿಲ್ಲದೆ ಓದಿದ್ದೇ ಓದಿದ್ದು. ಫಲ? ಎಲ್ಲ ಪರೀಕ್ಷೆಗಳಲ್ಲಿ ಎಲ್ಲ ವಿಷಯಗಳಲ್ಲಿ ಪ್ರಥಮ ಸ್ಥಾನ! ಜೊತೆಗೆ ಯೋಗಾಸನ, ಸೂರ್ಯನಮಸ್ಕಾರ, ಲಾಠಿ, ಲೇಜಿಮ್, ಮಲ್ಲಕಂಬ ಇತ್ಯಾದಿಗಳ ಕಲಿಕೆ; ನಾಟಕ, ಚರ್ಚೆ, ಭಾಷಣ ಸ್ಪರ್ಧೆಗಳಲ್ಲಿ ಭಾಗವಹಿಸುವಿಕೆ.

ಅಲ್ಲಿಂದ ಮುಂದೆ ಕಲಬುರಗಿಯಲ್ಲಿ ಕಲಿಕೆ. ಅಲ್ಲಿ ಶ್ರೀ ಶರಣಬಸವೇಶ್ವರ ದಾಸೋಹ ಪೀಠದ ಪೂಜ್ಯ ದೊಡ್ಡಪ್ಪ ಅಪ್ಪಾ ಅವರ, ಚೌದಾಪುರಿ ಹಿರೇಮಠದ ಶ್ರೀಗಳ, ಗುರುಬಸವ ಮಠದ ಶ್ರೀಗಳ ಆಶ್ರಯದಲ್ಲಿ ಮೊದಲಿನ ಎರಡು ವರ್ಷ ವಿದ್ಯಾಭ್ಯಾಸದ ಮುಂದುವರಿಕೆ. ಅಷ್ಟರಲ್ಲಿ ಗಳಿಸಿದ್ದ ಖ್ಯಾತಿಯಿಂದ ಅಂದಿನ ಪ್ರಿನ್ಸಿಪಾಲರಾಗಿದ್ದ ಹಕ್ಕಾನಿ ಸಾಹೇಬರ ದೃಷ್ಟಿ ನನ್ನ ಮೇಲೆ ಬಿದ್ದು ಸರಕಾರೀ ವಿದ್ಯಾರ್ಥಿನಿಲಯಕ್ಕೆ ಸೇರ್ಪಡೆ. ನನ್ನನ್ನು ಇಂಗ್ಲಿಷ್ ಭಾಷೆಯಲ್ಲಿ ಹೈದರಾಬಾದು ಸಂಸ್ಥಾನದಲ್ಲಿಯೇ ಪ್ರಥಮನನ್ನಾಗಿಸಬೇಕೆಂದು ಪಟ್ಟು ಹಿಡಿದ ಉದಾರ ಹೃದಯದ ಅಜೀಜ್‌ಖಾನ್ ಸಾಹೇಬರು ಹತ್ತು ತಿಂಗಳು ತಮ್ಮ ಮನೆಯಲ್ಲಿ ಉಚಿತವಾಗಿ ನನಗೆ ಪಾಠ ಹೇಳಿದರು. ಅವರ ಶ್ರಮ ಫಲಿಸಿ ನಾನು ಮ್ಯಾಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ಇಂಗ್ಲಿಷ್ ಕನ್ನಡಗಳಲ್ಲಿ ಮೊದಲಿಗನಾಗಿ, ಒಟ್ಟಿನಲ್ಲಿ ಮೂರನೆಯವನಾಗಿ, ಉರ್ದು ಭಾಷೆಯಲ್ಲಿ ಕಾಲೇಜಿಗೆ ಮೊದಲಿಗನಾಗಿ ಪಾಸಾದೆ. ಹಕ್ಕಾನಿ ಸಾಹೇಬರಿಗೆ ಹಿಗ್ಗು, ಹೆಮ್ಮೆ; ಅಜೀಜ್‌ಖಾನ್ ಸಾಹೇಬರ ಮುಖದ ಮೇಲೆ ಗೆಲವಿನ ನಗು, ಕಲಬುರಗಿ ನಗರದಲ್ಲೆಲ್ಲ ಸಂತೋಷದ ಲಹರಿಗಳು. ಕಲಬುರಗಿಗೆ ಸೀಮಿತವಾಗಿದ್ದ ನನ್ನ ಖ್ಯಾತಿ ಹೈದರಾಬಾದಿನವರೆಗೂ ಹರಡಿ ನನ್ನೆಡೆಗೆ ಸಂಸ್ಥಾನದ ನಾನಾ ಕಡೆಗಳಿಂದ ಅಭಿನಂದನ ಪತ್ರಗಳ ಪ್ರವಾಹ ಹರಿದು ಬಂದಾಗ ನನಗೆ ದಿಗ್ಭ್ರಮೆ.

ಈ ಮೂರು ವರ್ಷಗಳ ಅವಧಿ (1933-35) ನನ್ನ ಬದುಕಿನಲ್ಲಿ ಮಹತ್ವದ ಪರಿವರ್ತನೆಯ ಕಾಲ. ಪ್ರಥಮ ವರ್ಷದಲ್ಲಿಯೇ, ಒಂದೇ ಕವಿತೆ ಬಂದು ಸಂದಿಗ್ಧಕ್ಕೆ ಸಿಕ್ಕಿಕೊಂಡಿದ್ದ ಕನ್ನಡ ಕವಿತಾ ಸ್ಪರ್ಧೆಯನ್ನು ಸಫಲಗೊಳಿಸಲೆಂದೇ ಒಂದು ಕವಿತೆ ಬರೆದು ಕಳಿಸಿದೆ. ಅದೇ ತಾನೇ ಕಲಬುರಗಿಯಲ್ಲಿ ತಲೆ ಎತ್ತತೊಡಗಿದ್ದ ಕನ್ನಡ ಚಳವಳಿ ಈ ಕವಿತಾ ಸ್ಪರ್ಧೆಯ ಸೋಲಿನಿಂದಾಗಿ ಕುಂಠಿತವಾಗದಿರಲೆಂಬುದು ಆ ಕವಿತೆಯ ಹಿಂದೆ ಕೆಲಸ ಮಾಡಿದ ಪ್ರೇರಕ ಶಕ್ತಿ. ಅದೇ ಕವಿತೆಗೇ ಪುರಸ್ಕಾರ ಬಂದುದು ನನ್ನನ್ನು ಮೂಕ ವಿಸ್ಮಿತನನ್ನಾಗಿ ಮಾಡಿತು. ಬೆಳಗಾಗುವುದರೊಳಗೆ ಕವಿಯಾಗಿಬಿಟ್ಟೆ! ಆಮೇಲೆ ಕನ್ನಡ ಚಳುವಳಿಗೆ ನನ್ನ ಕಾಣಿಕೆಯೆಂದು ಕವನಗಳನ್ನೂ ಲೇಖನಗಳನ್ನೂ ಬರೆಯಲೇ ಬೇಕಾಯಿತು. ಆಗ ಕನ್ನಡದಲ್ಲಿ ಬರೆಯುವವರೇ ಬಹಳ ಕಡಿಮೆಯಿದ್ದ ಆ ಭಾಗದಲ್ಲಿ ನಾನು ಕವಿ, ಲೇಖಕ, ವಾಗ್ಮಿಯೆಂದು ಸುಲಭವಾಗಿಯೇ ಸ್ವೀಕೃತನಾಗಿಬಿಟ್ಟೆ.

ಆಗ ಅಲ್ಲಿ ಕನ್ನಡ ಚಳುವಳಿಯ ಸೂತ್ರಧಾರರಾಗಿದ್ದ ಪ್ರೊ. ತವಗ ಭೀಮಸೇನರಾಯರು, ಕಪಟರಾಳ ಕೃಷ್ಣರಾಯರು, ಅಶ್ವತ್ಥರಾಯರು, ಅಣ್ಣಾರಾಯರು, ಶರಣಕವಿಗಳು ಇತ್ಯಾದಿ ಕನ್ನಡ ಭಕ್ತರ ಸಹವಾಸದಲ್ಲಿ ನನ್ನ ಕನ್ನಡ ಭಕ್ತಿಯೂ ಕರಿಗೊಂಡಿತು. ಆಗ ಅಲ್ಲಿಗೆ ಆಗಮಿಸಿ ತಮ್ಮ ಭಾವಗೀತೆಗಳಿಂದ ಕಲಬುರಗಿಯ ಕನ್ನಡಿಗರ ಮನಗಳನ್ನು ಸೂರೆಗೊಂಡಿದ್ದ ನಾಡಕವಿ ಬೇಂದ್ರೆಯವರು ನನ್ನ ಕವನಗಳನ್ನು ತಿದ್ದಿ ಬೆನ್ನು ಚಪ್ಪರಿಸಿದರು. ಆಮೇಲೆ ಬಂದ ಪ್ರೊ. ವಿ. ಕೃ. ಗೋಕಾಕರೂ, ಪ್ರೊ। ರಂ. ಶ್ರೀ. ಮುಗಳಿ ಅವರು, ಬೆಟಗೇರಿ ಕೃಷ್ಣಶರ್ಮರೂ, ಟಿ. ಕೆ. ತುಕೋಳರೂ, ಕರ್ನಾಟಕ ಗಾಂಧಿಯೆಂದು ಖ್ಯಾತರಾಗಿದ್ದ ಹರ್ಡೇಕರ್ ಮಂಜಪ್ಪನವರು, ಇನ್ನೂ ಅನೇಕ ಖ್ಯಾತನಾಮರು ನನಗೆ ಸೂಕ್ತ ಮಾರ್ಗದರ್ಶನ ನೀಡಿದರು. ಆಚಾರ್ಯಶ್ರೀ ಅವರ ಕನ್ನಡ ಮತ್ತು ಇಂಗ್ಲಿಷ್ ಭಾಷಣಗಳಂತೂ ನನ್ನ ಮೇಲೆ ಅಚ್ಚಳಿಯದ ಪ್ರಭಾವವನ್ನು ಬೀರಿದುವು. ಮಹಾಕವಿ ಮಹಮ್ಮದ್ ಇಕ್‌ಬಾಲರ ಒಂದು ಕವಿತೆಯನ್ನು ಕನ್ನಡಿಸಿದೆ. ಅದು 'ಜಯಕರ್ನಾಟಕ'ದಲ್ಲಿ ಪ್ರಕಟವಾಗಲು ಆತ್ಮವಿಶ್ವಾಸ ಅಂಕುರಿಸಿತು. ಅಲ್ಲಿಗೆ ಆಗಮಿಸುತ್ತಿದ್ದ ಉರ್ದು ಕವಿಗಳ ಪ್ರಭಾವಕ್ಕೂ ಒಳಗಾದೆ. ಉರ್ದು ಮುಷಾಯಿರಾಗಳು ಇಂದಿಗೂ ನನಗೆ ಆಕರ್ಷಕವಾಗಿ ಉಳಿದಿವೆ. ಅಲ್ಲಿ ಆಗ ಮರಾಠಿ ಪ್ರಾಬಲ್ಯವಿದ್ದುದರಿಂದ ಆಗಾಗ ಜ್ಞಾನೇಶ್ವರ, ತುಕಾರಾಮ, ನಾಮದೇವ ಮೊದಲಾದವರ ಬಗ್ಗೆ ಉಪನ್ಯಾಸಗಳನ್ನು ಆಲಿಸುವ ಅವಕಾಶಗಳೂ ಸಿಕ್ಕುತ್ತಿದ್ದುವು. ಕಾಲೇಜು ಯೂನಿಯನ್ನಿಗೆ ಅವಿರೋಧವಾಗಿ ಕಾರ್ಯದರ್ಶಿಯಾಗಿ ಆಯ್ಕೆಗೊಂಡಾಗಂತೂ ಹಿಂದೂ ಮುಸಲ್ಮಾನರೆನ್ನದೆ ಎಲ್ಲರೂ ನನ್ನ ಸುತ್ತು ಕುಣಿದಾಗ ನಾನು ನಿಜಾಮನ ರಾಜ್ಯದಲ್ಲಿರುವೆನೆಂಬುದು ನನಗೆ ಮರೆತೇ ಹೋಯಿತು! ಆ ಸಹನೆ, ಆ ಸ್ನೇಹ, ಆ ಪರೋತ್ಕರ್ಷ ಪ್ರಸನ್ನತೆ, ಆ ಸಾಮರಸ್ಯದ ದಿನಗಳು ಎತ್ತ ಹೋದುವೋ ಮತ್ತೆ ಕಾಣಲಿಲ್ಲ!

ಗುರುಬಸವ ಮಠದಲ್ಲಿ ಆಶ್ರಯ ಪಡೆದಿದ್ದ ವಿದ್ಯಾರ್ಥಿಗಳು ವರ್ಷಕ್ಕೊಂದು ನಾಟಕ ಆಡುತ್ತಿದ್ದರು. ಅವರ ಕಿತ್ತೂರು ಚೆನ್ನಮ್ಮನ ನಾಟಕ ಪ್ರಯೋಗ ಪ್ರಶಂಸಾರ್ಹವಾಗಿದ್ದಿತು. ನಾನೂ ಒಂದು ನಾಟಕದಲ್ಲಿ ಭಾಗವಹಿಸಿದೆ. ಮಿತ್ರರ ಒತ್ತಾಯದ ಮೇರೆಗೆ ಬೆಳಧಡಿ ಮಲ್ಲಮ್ಮನ ನಾಟಕ ಬರೆದುಕೊಟ್ಟೆ. ಎಲ್ಲರೂ ಕೂಡಿ ಕಲಿತು ನಾಟಕ ಆಡಿದೆವು. ಅದ್ಭುತ ಯಶಸ್ಸು ದೊರೆಯಿತು. ಅದರಲ್ಲಿ ನಾನು ವಹಿಸಿದ್ದ ಶಿವಾಜಿಯ ಪಾತ್ರವನ್ನು ಎಲ್ಲರೂ ಮೆಚ್ಚಿದರು. ಗದ್ದುಗೆ

ಮಠದಲ್ಲಿದ್ದ ತರುಣ ಸಂಘದ ಕಾರ್ಯದರ್ಶಿಯಾದೆ. ಕಾಲೇಜು ಕರ್ನಾಟಕ ಸಂಘದ ಕಾರ್ಯದರ್ಶಿಯಾದೆ. ನನ್ನನ್ನು ತಮಾಷೆಗಾಗಿ 'ಕಾರ್ಯದರ್ಶಿ'ಯೆಂದೇ ಜನರು ಕರೆಯುವಷ್ಟು ಹಲವೆಡೆ ಕಾರ್ಯದರ್ಶಿಯಾಗಿ ಕೆಲಸ ಮಾಡಿದೆ. ಸ್ಕೌಟ್ಸ್ ಲೀಡರ್, ಫುಟ್‌ಬಾಲ್ ಪ್ಲೇಯರ್, ಓಟಗಾರ—ಇವು ನನಗಿದ್ದ ಇತರ ಹೆಸರುಗಳು.

ಕಾಲೇಜಿನ ಕಟ್ಟೆಯನ್ನು ದಿಟ್ಟ ಹೆಜ್ಜೆಗಳೊಡನೆ ಹತ್ತಿದೆ. ಅಜೀಜ್‌ಖಾನ್ ಸಾಹೇಬರು ಪಡೆದ ಕೀರ್ತಿಯನ್ನು ತಾವೂ ಪಡೆಯಬೇಕೆಂದು ಇಂಗ್ಲಿಷ್ ಪ್ರಾಧ್ಯಾಪಕ ಮಲ್ಲಿಕಾರ್ಜುನಯ್ಯನವರು ಮುಂದಾದರು. ನನ್ನ ಅಭ್ಯಾಸ ಕ್ರಮವನ್ನು ರೂಪಿಸಿ ಕೊಟ್ಟರು. ಅವರ ಸಲಹೆಯಂತೆ English Men of Letters ಪುಸ್ತಕ ಮಾಲೆಯ ಎಲ್ಲ ಪುಸ್ತಕಗಳನ್ನು ಓದಿ ಮುಗಿಸಿದೆ. ಪ್ರಾಧ್ಯಾಪಕ ತವಗ ಭೀಮಸೇನರಾಯರು ಕಾಲೇಜು ಗ್ರಂಥಾಲಯದಲ್ಲಿದ್ದ ಕನ್ನಡ ಪುಸ್ತಕಗಳು ಸಾಲವೆಂದು ತಮ್ಮ ಸ್ವಂತ ಸಂಗ್ರಹದ ಪುಸ್ತಕಗಳನ್ನು ಓದಲು ಕೊಡುತ್ತಿದ್ದರು. ಸಂಸ್ಕೃತ ಪಂಡಿತರಾದ ಆಚಾರ್ಯ ಧಾರವಾಡಕರರು ಸಂಸ್ಕೃತ ಪಠ್ಯಪುಸ್ತಕಗಳನ್ನಷ್ಟೇ ಅಲ್ಲ, ಬೇರೆ ಕಾವ್ಯ ನಾಟಕಗಳ ವಿಷಯವಾಗಿಯೂ ಉದ್ಬೋಧಕವಾಗಿ ಹೇಳಿಕೊಡುತ್ತಿದ್ದರು. ಅರ್ಥಶಾಸ್ತ್ರ ಪ್ರಾಧ್ಯಾಪಕರೂ ಅಷ್ಟೆ, ಹಕ್ಕಾನಿ ಸಾಹೇಬರಂತೂ ನನಗೆ ತಿಂಗಳಿಗೆ ಹದಿನೈದು ರೂಪಾಯಿಗಳ ಮೆರಿಟ್ ವಿದ್ಯಾರ್ಥಿವೇತನ ಸಿಕ್ಕುತ್ತಿದ್ದರೂ ತಮ್ಮ ವಿಶೇಷಾಧಿಕಾರ ಪ್ರಯೋಗಿಸಿ ತಿಂಗಳಿಗೆ ಎಂಟು ರೂಪಾಯಿಗಳ ಬರ್ಸರಿಯನ್ನೂ ಮಂಜೂರು ಮಾಡಿದರು. ಶುಲ್ಕ ವಿನಾಯಿತಿಯನ್ನು ಮುಂದುವರಿಸಿದರು. ಸರಕಾರಿ ಹಾಸ್ಟೆಲಿನಲ್ಲೂ ಎಲ್ಲವನ್ನೂ ಉಚಿತವಾಗಿಸಿದರು. ಅವರ ಔದಾರ್ಯವೇ ಔದಾರ್ಯ.



ನಾನೂ ವಿಶ್ವವಿದ್ಯಾಲಯಕ್ಕೇ ಎಲ್ಲ ವಿಷಯಗಳಲ್ಲಿ, ಒಟ್ಟಿನಲ್ಲಿ ಪ್ರಥಮನಾಗಿ ಪಾಸಾಗಬೇಕೆಂಬ ಛಲದಿಂದ ಓದತೊಡಗಿದೆ. ಕನ್ನಡದ ಕರೆಗೆ ಮಾತ್ರ ಓಗೊಡುತ್ತ ವ್ಯಾಸಂಗ ನಿರತನಾದೆ. ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ಜರುಗಿದ ಅಂತರ್ ಕಾಲೇಜು ಭಾಷಣ ಸ್ಪರ್ಧೆಯಲ್ಲಿ ಕಾಲೇಜಿನ ಪ್ರತಿನಿಧಿಯಾಗಿ ಭಾಗವಹಿಸಿ ಬಂದೆ. ವಿಶ್ವವಿದ್ಯಾಲಯದ ವೈಭವಕ್ಕೆ ಬೆರಗಾಗಿ ಬೇಗ ಅದನ್ನು ಸೇರಬೇಕೆಂಬ ಬಯಕೆ ಬಲವಾಗಲು ಇನ್ನೂ ಆಸ್ಥೆಯಿಂದ ಅಭ್ಯಾಸ ಮುಂದುವರೆಸಿದೆ.

ಆದರೆ ಆಗಬಾರದ್ದು ಆಗಿಹೋಯಿತು. ಇಂಟರ್ ಪರೀಕ್ಷೆಗೆ ಒಂದೇ ಒಂದು ತಿಂಗಳು ಉಳಿದಿರುವಾಗ ತೀವ್ರ ಜ್ವರಕ್ಕೆ ತುತ್ತಾದೆ. ಹಕ್ಕಾನಿ ಸಾಹೇಬರು ನಿತ್ಯ ಡಾಕ್ಟರರೊಡನೆ ಬಂದು ನೋಡಿಕೊಂಡು ಹೋಗುತ್ತಿದ್ದರು. ಪ್ರಾಧ್ಯಾಪಕರೂ ಅಷ್ಟೇ ವಾತ್ಸಲ್ಯ ತೋರಿದರು. ಆದರೆ ಜ್ವರ ನಿಲ್ಲಲಿಲ್ಲ. ಪರೀಕ್ಷೆ ಕಟ್ಟುವ ಆಸೆ ಉಳಿಯಲಿಲ್ಲ. ಉಪಾಯವಿಲ್ಲದೆ ಊರಿಗೆ ಹಿಂದಿರುಗಿದೆ. ತಂದೆ-ತಾಯಿಗಳೂ, ಬಂಧು-ಬಳಗದವರೂ ಹೌಹಾರಿದರು. ಗದಗಿನಲ್ಲಿ ಚಿಕಿತ್ಸೆ ಪ್ರಾರಂಭವಾಯಿತು. ಬೆಳಗಾವಿಗೆ ಹೋಗಿ ಎಕ್ಸರೇ ತೆಗೆಸಿಕೊಂಡು ಬಂದೆ. ಏನೂ ಪ್ರಯೋಜನವಾಗಲಿಲ್ಲ. ಅಲ್ಲಿ ರಾಯಬಾಗಕರ್ ಎಂಬ ಪ್ರಸಿದ್ಧ ಆಯುರ್ವೇದ ತಜ್ಞರ ಬಳಿಗೆ ನನ್ನ ತಂದೆಯವರು ನನ್ನನ್ನು ಕರೆದೊಯ್ದರು. ನನ್ನ ಚಿಕಿತ್ಸೆ ಸರಿಯಾಗಿ ಸಾಗಲೆಂದು ಗದಗಿನಲ್ಲಿ ಬಾಡಿಗೆ ಮನೆಯನ್ನೇ ಹಿಡಿದರು. ಗುಣವಾಯಿತೆಂದು ದ್ಯಾಂಪುರಕ್ಕೆ ಹಿಂದಿರುಗಿದೆವು. ಗೆಳೆಯರ ಬಲವಂತಕ್ಕೆ ಮಣಿದು ಹಂಪೆಯ ಪ್ರವಾಸಕ್ಕೆ ಹೋಗಿಬಂದೆ. ಮತ್ತೆ ಜ್ವರ! ನನಗಾಗ ನನಗೆ ಅಂಟಿಕೊಂಡಿದ್ದು ಕ್ಷಯರೋಗವೆಂಬುದು ಖಾತ್ರಿಯಾಯಿತು. ಅದಾಗಲೇ ನನ್ನ ಚಿಕಿತ್ಸೆಗಾಗಿ ಶಕ್ತಿ ಮೀರಿ ವೆಚ್ಚಮಾಡಿ ಬರಿಗೈಯವರಾಗಿದ್ದ ವಾತ್ಸಲ್ಯದ ಪುತ್ಥಳಿಗಳಂತಿದ್ದ ತಂದೆ ತಾಯಿಗಳಿಗೆ, ತಮ್ಮಂದಿರಾದ ಅನ್ನದಾನಿ ಬಸವರಾಜನಿಗೆ, ತಂಗಿಯರಾದ ವೀರಾಂಬೆ, ಶರಣಾಂಬೆಯರಿಗೆ, ಎಲ್ಲರಿಗೆ ಹೊರೆಯಾಗುವುದಕ್ಕಿಂತ ಎಲ್ಲಿಗಾದರೂ ಹೋಗಿ ರೋಗಗ್ರಸ್ತ ಶರೀರವಿದನ್ನು ಬಿಸಾಡಿ ಬಿಡಬೇಕೆನ್ನಿಸಿತು ನನಗೆ. ಫಕ್ಕನೆ ಮದನಪಲ್ಲಿಯ ನೆನಪಾಯಿತು. ಕಿಸೆಯಲ್ಲಿ ಐವತ್ತು ರೂಪಾಯಿಗಳಿದ್ದುವು. ಯಾರಿಗೂ ಹೇಳದೆ ಮದನಪಲ್ಲಿಗೆ ಹೊರಟುಬಿಟ್ಟೆ. ಡಾ। ಮುಲ್ಲರನ್ನು ನೋಡುತ್ತಲೇ ಧೈರ್ಯ ಬಂದಿತು. ಬಹಳ ಸಹಾನುಭೂತಿಯಿಂದ ಎಲ್ಲ ಪರೀಕ್ಷೆ ಮಾಡಿಸಿದರು. ತಾವೇ ವರದಿಗಳನ್ನು ವೀಕ್ಷಿಸಿ, ಶರೀರ ಪರೀಕ್ಷೆ ಮಾಡಿ 'ನಿನಗೆ ಕ್ಷಯರೋಗವಿಲ್ಲ—ನಿಶ್ಚಿಂತನಾಗಿ ಹೋಗು!' ಎಂದು ನಿಶ್ಚಯದ ಸ್ವರದಲ್ಲಿ ಹೇಳಿದರು. ಯಾವ ಫೀಯನ್ನೂ ಕೊಳ್ಳಲಿಲ್ಲ. ಕೇಳಿದ್ದರೆ ಕೊಡಲು ಹಣವಿರಲಿಲ್ಲ. ನಂದಿಸುತ್ತ ಹಿಂದಿರುಗಿದೆ.

ನಾನಂದೇ ನಿರೋಗಿಯಾಗಿಬಿಟ್ಟೆ. ಖಾಸಗಿಯಾಗಿ ಇಂಟರ್ ಪರೀಕ್ಷೆ ಕಟ್ಟಬೇಕೆಂದು ಅಭ್ಯಾಸ ಪ್ರಾರಂಭಿಸಿದೆ. ಆದರೆ ಮತ್ತೊಮ್ಮೆ ಮನೆಬಿಟ್ಟು ಓಡಿ ಹೋಗುವ ಯೋಗವಿತ್ತು! ನನ್ನ ಸೋದರ ಮಾವನ ಮಗಳನ್ನು ನನಗೇ ಕೊಡಬೇಕೆಂದು ಅವರೆಲ್ಲರ ಇಚ್ಛೆ; ತೆಗೆದುಕೊಳ್ಳಬೇಕೆಂದು ತಾಯಿಯ ಇಚ್ಛೆ. ಯಾವುದೋ ದುರ್ಬಲ ಕ್ಷಣದಲ್ಲಿ ತಂದೆಯವರೂ ಒಪ್ಪಿ ಮದುವೆಯ ಬಗ್ಗೆ ಮಾತನಾಡತೊಡಗಿದರು. ಮತ್ತೆ ಮನೆಬಿಟ್ಟೆ. ಈ ಸಲ ಓಡಿಹೋದದ್ದು ಆಲಮಟ್ಟಿಗೆ—ಹರ್ಡೇಕರ್ ಮಂಜಪ್ಪನವರ ಆಶ್ರಮಕ್ಕೆ, ಆಶ್ರಯಕ್ಕೆ.

ಎಲ್ಲವನ್ನೂ ಕೇಳಿ ತಿಳಿದುಕೊಂಡು 'ಒಳ್ಳೆಯದನ್ನೇ ಮಾಡಿದೆ'ಯೆಂದು ಹೇಳಿ ನನ್ನ ಕುಸಿದ ಚೇತನವನ್ನು ಮತ್ತೆ ಪುಟಿಸಿದರು ಮಂಜಪ್ಪಣ್ಣನವರು. "ಇಲ್ಲಿಯೇ ಇದ್ದು ನಿನ್ನ ವ್ಯಾಸಂಗವನ್ನು ಮುಂದುವರೆಸು; ಎಲ್ಲ ತಿಳಿ ಆದಾಗ ಊರಿಗೆ ಹೋಗಿ ವಿದ್ಯಾಭ್ಯಾಸವನ್ನು ಪೂರ್ಣಗೊಳಿಸು, ಅರ್ಧಕ್ಕೇ ನಿಲ್ಲಿಸಬೇಡ" ಎಂದು ಸಾಂತ್ವನ ನೀಡಿದರು. ಆರು ತಿಂಗಳು ಅಲ್ಲಿದ್ದೆ. ಅವರ ಅಪಾರ ಜ್ಞಾನ ಜಾಹ್ನವಿಯಲ್ಲಿ ಮಿಂದು ಮಡಿಯಾದೆ. ಅವರ ವಾರಪತ್ರಿಕೆ 'ಶರಣ ಸಂದೇಶ'ದಲ್ಲಿ ಲೇಖನಗಳನ್ನೂ, ಕವನಗಳನ್ನೂ ಪ್ರಕಟಿಸುತ್ತ, ಅಲ್ಲಿಯ ದೊಡ್ಡ ಗ್ರಂಥ ಭಂಡಾರದ ಪ್ರಯೋಜನ ಪಡೆಯುತ್ತ, ಅವರ ಪವಿತ್ರ ಜೀವನದಿಂದ ಸ್ಫೂರ್ತಿ ಪಡೆಯುತ್ತ ದಿನಗಳೆದೆ. ಅವರೇ ಸಂಪಾದಿಸಿದ್ದ 'ಸುಬೋಧ ಸಾರ'ಕ್ಕೆ ನನ್ನಿಂದ ಮುನ್ನುಡಿ ಬರೆಸಿದರು ಆ ಹಿರಿಯರು. 'ಶರಣ ಸಂದೇಶ'ದಲ್ಲಿ ಪ್ರಕಟವಾದ ನನ್ನ 'ಕಾವ್ಯದೇವಿ' ಎಂಬ ಕವನ 'ನಿನ್ನಾತ್ಮನಾನಂದ ನನ್ನಾತ್ಮ ಕಾವ್ಯ! ಇಂತು 'ಕಾವ್ಯಾನಂದ' ನಾಮ ಸುಶ್ರಾವ್ಯ ಎಂಬ ಸಾಲುಗಳೊಡನೆ ಮುಕ್ತಾಯಗೊಂಡಿದ್ದಿತು. ಅಲ್ಲಿಗೆ ಹೋದಾಗ ಸಿದ್ದಯ್ಯ ಪುರಾಣಿಕನಾಗಿದ್ದೆ; ಅಲ್ಲಿ 'ಕಾವ್ಯಾನಂದ'ನಾಗಿ ಮರುಹುಟ್ಟು ಪಡೆದೆ. ನಿಜವಾಗಿ ನನ್ನ ಪಾಲಿಗೆ ಅದು ಮರುಹುಟ್ಟೇ ಎನ್ನಬೇಕು. ಅಲ್ಲಿ ಆರು ತಿಂಗಳುಗಳಲ್ಲಿ ಕಲಿತಷ್ಟನ್ನು ಮುಂದೆ ಆರು ವರ್ಷಗಳಲ್ಲಿಯೂ ಕಲಿಯಲಿಲ್ಲ ನಾನು.

ಊರಿಗೆ ಮರಳಿ ಇಂಟರ್ ಪರೀಕ್ಷೆಗೆ ಖಾಸಗಿ ವಿದ್ಯಾರ್ಥಿಯಾಗಿ ಹೋದೆ. ಫಲಿತಾಂಶ ನನ್ನನ್ನೇ ಬೆಚ್ಚಿಸಿತು. ಮತ್ತೆ ಕನ್ನಡ ಸಂಸ್ಕೃತಗಳಲ್ಲಿ ಮೊದಲನೆಯವನಾಗಿ, ಇಂಗ್ಲಿಷಿನಲ್ಲಿ ಎರಡನೆಯವನಾಗಿ, ಒಟ್ಟಿನಲ್ಲಿ ಮೂರನೆಯವನಾಗಿ ಪಾಸಾಗಿದ್ದೆ. ಮತ್ತೆ ಮೆರಿಟ್ ವಿದ್ಯಾರ್ಥಿವೇತನ ಗಟ್ಟಿಯಾಯಿತು. ಉಬ್ಬಿ ಉಸ್ಮಾನಿಯಾ ವಿಶ್ವವಿದ್ಯಾಲಯ ಸೇರಿದೆ. ಹಕ್ಕಾನಿ ಸಾಹೇಬರು ಸ್ವಪ್ರೇರಣೆಯಿಂದಲೇ ಕೊಟ್ಟಿದ್ದ ಉತ್ಪ್ರೇಕ್ಷೆಯೆನ್ನಿಸಬಹುದಾಗಿದ್ದ ಪತ್ರದೊಡನೆ ಪ್ರೊ। ಹುಸೇನ ಅಲಿಖಾನ ಸಾಹೇಬರನ್ನು ಕಂಡೆ. ಅವರೂ ಅಷ್ಟೇ ಉದಾರಿಗಳು. ಕಲಬುರಗಿಯಲ್ಲಿ ಹಕ್ಕಾನಿ ಸಾಹೇಬರು ನನ್ನ ಆಧಾರವಾಗಿದ್ದಂತೆ ಹೈದರಾಬಾದಿನಲ್ಲಿ ಹುಸೇನ ಅಲಿಖಾನ ಸಾಹೇಬರು ನನ್ನ ಆಧಾರರಾದರು. ಅವರು ನಿರಾಧಾರರಾಧಾರರೆಂದೇ ಹೆಸರಾಗಿದ್ದರು.

ಉಸ್ಮಾನಿಯಾ ವಿಶ್ವವಿದ್ಯಾಲಯದ ಆರ್ಟ್ಸ್ ಕಾಲೇಜು ಪ್ರೇಕ್ಷಣೀಯವಾದುದು: ಅದರ 'ಬಿ'. ಹಾಸ್ಟೆಲ್ ವಿದ್ಯಾರ್ಥಿಗಳ ಸ್ವರ್ಗ. ಅಂಥ

ಹಾಸ್ಟೆಲಿನಲ್ಲಿದ್ದು ಅಂಥ ಕಾಲೇಜಿನಲ್ಲಿ ಓದುವ ಅವಕಾಶ ಸಿಕ್ಕು ಆನಂದ ತುಂದಿಲನಾದೆ. ಪದವಿ ತರಗತಿಯಲ್ಲಿ ನನಗೆ ಪ್ರಿಯವೆನಿಸಿದ್ದ ಅರ್ಥಶಾಸ್ತ್ರವನ್ನು ಓದಬೇಕೆಂಬ ಆಸೆಯಿದ್ದಿತು. ಆದರೆ ಹಿಂದೆ ಹೈಸ್ಕೂಲಿನಲ್ಲಿ ಗಣಿತ ವಿಜ್ಞಾನಗಳನ್ನು ಓದುವ ಆಸೆ ಫಲಿಸದೇ ಹೋದಂತೆ ಇಲ್ಲಿಯೂ ಅರ್ಥಶಾಸ್ತ್ರವನ್ನು ಓದಬೇಕೆಂಬ ಆಸೆ ಫಲಿಸಲಿಲ್ಲ. 'ನಾನು ಹುಟ್ಟಿರುವುದು ಕನ್ನಡಕ್ಕಾಗಿ' ಎಂಬ ಭಾವನೆ ಬಲಿಯತೊಡಗಿತು. ಸಂಪೂರ್ಣ ಶ್ರದ್ಧೆಯೊಡನೆ ಕನ್ನಡ ಅಧ್ಯಯನ ಪ್ರಾರಂಭಿಸಿದೆ; ಇಂಗ್ಲಿಷ್, ಉರ್ದು, ಸಂಸ್ಕೃತ, ಹಿಂದೀ ಸಾಹಿತ್ಯಗಳ ಆಚಾರ್ಯಕೃತಿಗಳನ್ನು ಓದುತ್ತಲೇ ಕನ್ನಡ ಓದುತ್ತಲೇ ಕನ್ನಡದ ವ್ಯಾಪಕವಾದ ಅಧ್ಯಯನವನ್ನು ಆರಂಭಿಸಿದೆ. ಪ್ರೊ। ಡಿ. ಕೆ. ಭೀಮಸೇನ ರಾಯರು, ವಿದ್ವಾನ್ ಮಾನ್ವಿ ನರಸಿಂಗರಾಯರು ಬಹಳ ಕಲಿಸಿದರು. ಆ ಕಾಲದ ಆಂಗ್ಲ ಪ್ರಾಧ್ಯಾಪಕರಲ್ಲಿಯೇ ಬಿ. ಎಂ. ಶ್ರೀ ಅವರಂತೆ ಅತ್ಯಂತ ಪ್ರಖ್ಯಾತರಾಗಿದ್ದ ಪ್ರೊ। ಟಿ. ವೀರಭದ್ರುಡು ಅವರು ಮತ್ತು ಪ್ರೊ। ಎಲ್. ಎಸ್. ದೊರೆಸ್ವಾಮಿ ಅವರು, ಪ್ರೊ। ವ್ಹಿ. ಎಸ್. ಕೃಷ್ಣನ್ ಅವರು ಆಂಗ್ಲ ಸಾಹಿತ್ಯದ ಸಾರವನ್ನುಣಿಸಿದರು. ಪ್ರೊ। ಹರಿಹರ ಶಾಸ್ತ್ರಿಗಳು, ಡಾ। ಆರ್ಯೇಂದ್ರ ಶರ್ಮರು ಸಂಸ್ಕೃತ ಸಾಹಿತ್ಯದ ಸುಧೆಯನ್ನು ಕುಡಿಸಿದರು. ಈ ತ್ರಿವೇಣೀ ಸಂಗಮ ಸ್ನಾತನಾಗಿ ಪೂತನಾದೆ.

ಅಲ್ಲಿಯ ಲಿಂಗಂಪಲ್ಲಿ ಹಾಸ್ಟೆಲಿನ ಗೆಳೆಯರ ಆಗ್ರಹಕ್ಕೆ ಒಳಗಾಗಿ ಬಸವಣ್ಣನವರ ಬಗ್ಗೆ 'ಆತ್ಮಾರ್ಪಣೆ' ಎಂಬ ನಾಟಕ ಬರೆದೆ. ರೆಡ್ಡಿ ಹಾಸ್ಟೆಲಿನಲ್ಲಿ ಅದರ ಪ್ರಯೋಗ. ನಾನೇ ಬಸವ ಪಾತ್ರಧಾರಿ. ಪ್ರಚಂಡ ಯಶಸ್ಸು. ನಗರದ ಕನ್ನಡಿಗರಲ್ಲೆಲ್ಲ ಅದರದೇ ಪ್ರಸ್ತಾಪ, ಪ್ರಶಂಸೆ. ಧಾರವಾಡದಲ್ಲಿ 25ನೆಯ ಕನ್ನಡ ಸಾಹಿತ್ಯ ಸಮ್ಮೇಳನ ಜರುಗಿತು. ವ್ಯಾಕರಣಾ ತೀರ್ಥ ಚಂದ್ರಶೇಖರ ಶಾಸ್ತ್ರಿಗಳು ಅಧ್ಯಕ್ಷರು. ಗೆಳೆಯರೊಡನೆ ಹೋಗಿ ಸಮ್ಮೇಳನ ನೋಡಿಬಂದೆ. ಆಚಾರ್ಯ ಬಿ. ಎಂ. ಶ್ರೀ., ಆಚಾರ್ಯ ಮಾಸ್ತಿ, ವರಕವಿಗಳಾದ ಕೆ. ವಿ. ಪುಟ್ಟಪ್ಪ—ಬೇಂದ್ರೆಯವರು ಓದಿದ ಕವಿತೆಗಳಿಂದ ಮಂತ್ರಮುಗ್ಧನಾದೆ. ಗೋಕಾಕರಂತೂ ತಮ್ಮ 'ಸಮುದ್ರಗೀತೆಗಳು' ಕವನ ಸಂಗ್ರಹದಿಂದ ಒಂದು ಕವಿತೆ ಓದಿ ನವ್ಯ ಕಾವ್ಯದ ಯುಗವನ್ನೇ ಅನಾವರಣಗೊಳಿಸಿದರು. ಪ್ರೊ। ಬಸವನಾಳರು ಸ್ವಾಗತಾಧ್ಯಕ್ಷರು. ನಿಜವಾದ ಸಾಹಿತ್ಯ ಶರಣರು.

ಒಂದು ಸಂಜೆ ಧಾರವಾಡದ ಮುರುಘಾ ಮಠದಲ್ಲಿ, ತ್ರಿವಿಧ ತಪೋನಿಧಿ ಮೃತ್ಯುಂಜಯ ಮಹಾಸ್ವಾಮಿಗಳವರ ಸಾನ್ನಿಧ್ಯದಲ್ಲಿ ಕೆ. ವಿ. ಪುಟ್ಟಪ್ಪನವರ ಕವನ ವಾಚನ ಕಾರ್ಯಕ್ರಮ ನಡೆಯಿತು—ಕನ್ನಡ ಶಿವಯೋಗಿಗಳೆನಿಸಿದ್ದ ನವಿಲುಗುಂದ ಬಸವಲಿಂಗ ಸ್ವಾಮಿಗಳವರ ಪ್ರಯತ್ನದಿಂದ. ನಾನಲ್ಲಿಗೆ ಹೋದೆ. ಹಿಂದಿರುಗಿದಾಗ ನಾನು ನಾನಾಗಿ ಉಳಿದಿರಲಿಲ್ಲ.

ಇದೊಂದು ಅವಿಸ್ಮರಣೀಯ ಅನುಭವ ನನ್ನ ಪಾಲಿಗೆ. ಅದುವರೆಗೆ ಬೇಂದ್ರೆಯವರ ಗಾರುಡಕ್ಕೆ ಒಳಗಾಗಿದ್ದ ನಾನು ಅಂದು ಪುಟ್ಟಪ್ಪನವರ ಪ್ರಖರ ಪ್ರಭಾವಕ್ಕೂ ಒಳಗಾದೆ. ರವೀಂದ್ರ ಇಕಬಾಲ್, ಗಾಲಿಬ್, ಕಾಳಿದಾಸ, ಉಮರ, ಪಂಪ, ಬಸವ, ಅಲ್ಲಮ, ಅಕ್ಕಮಹಾದೇವಿ, ಹರಿಹರ, ಕುಮಾರವ್ಯಾಸರೊಡನೆ ಇವರಿಬ್ಬರೂ ನನ್ನ ಒಳಗನ್ನು ಆಳತೊಡಗಿದರು.

ಮರುವರ್ಷ ಹೈದರಾಬಾದಿನಲ್ಲಿ 26ನೆಯ ಕನ್ನಡ ಸಾಹಿತ್ಯ ಸಮ್ಮೇಳನ ಜರುಗಿತು. ಅಪ್ರತಿಮ ಪಂಡಿತ ಎ. ಆರ್. ಕೃಷ್ಣಶಾಸ್ತ್ರಿಗಳು ಅಧ್ಯಕ್ಷರು. ಅವರ ಅಂದಿನ ಭಾಷಣ ಇಂದಿಗೂ ನನಗೆ ಸ್ಫೂರ್ತಿದಾಯಿನಿ. ಬೇಂದ್ರೆಯವರು ತಮ್ಮ ಶ್ರಾವಣಬಂತು ಕವನವನ್ನೋದಿದರು, ಇಲ್ಲ. ಹಾಡಿದರು. ಸಭಿಕರಲ್ಲಿ ಮಿಂಚಿನ ಸಂಚಾರವಾಯಿತು. ಗೋಕಾಕರು, ಬೆಟಗೇರಿ ಕೃಷ್ಣಶರ್ಮರು, ಇನ್ನೂ ಕೆಲವು ಹಿರಿಯ ಕವಿಗಳು ಉನ್ನತ ಮಟ್ಟದ ಕವಿತೆಗಳನ್ನು ವಾಚಿಸಿದರು. ನನ್ನ ಸರದಿ ಬಂದಿತು. ಮೈಯೆಲ್ಲ ನಡುಕ. ಕಂಪಿಸುತ್ತಲೇ 'ಎರಡು ಚಿತ್ರಗಳು' ಎಂಬ ಕವಿತೆಯನ್ನೋದಿದೆ. ಸಭಿಕರ ಮೆಚ್ಚುಗೆಯ ಚಪ್ಪಾಳೆ ದಂಗುಗೊಳಿಸಿತು ನನ್ನನ್ನು. ಬೇಂದ್ರ ಗೋಕಾಕರು ಬೆನ್ನುತಟ್ಟಿದರು. ಮಾಸ್ತಿಯವರಂತೂ ಬೇರೆಡೆಗೆ ಕರೆದೊಯ್ದು 'ಮತ್ತೆ ಮತ್ತೆ ಓದಿಸಿ ಕೇಳಿ ಅಲ್ಲಲ್ಲಿ ತಿದ್ದಿ ಬಹಳ ಚೆನ್ನಾಗಿ ಬರೆಯುತ್ತೀಯಪ್ಪಾ, ಬರೆಯುವುದನ್ನು ಬಿಡಬೇಡ' ಎಂದು ಪ್ರೋತ್ಸಾಹಿಸಿದರು. ಅದಾಗಲೇ 'ಜಯಂತಿ'ಯಲ್ಲಿ ಪ್ರಕಟವಾಗಿದ್ದ ನನ್ನ ಕೆಲವು ಕವಿತೆಗಳನ್ನು ಮೆಚ್ಚಿ ಕೆಲವರ ಪತ್ರಗಳು ಬಂದಿದ್ದರಿಂದಲೂ,



ಈ ಹಿರಿಯರ ಹರಕೆ ನುಡಿಗಳಿಂದಲೂ 'ನಾನು ಕವಿಯಾಗಬಲ್ಲೆನೆ?' ಎಂಬ ಸಂಶಯ ತೊಲಗಿ ಆತ್ಮಪ್ರತ್ಯಯ ಒಡಮೂಡಿತು. ಹೈದರಾಬಾದಿಗೆ ನಾಡಹಬ್ಬ, ಕಾರ್ಯಕ್ರಮಗಳಿಗೆ, ಬೇರೆ ಕನ್ನಡ ಕಾರ್ಯಕ್ರಮಗಳಿಗೆ ಬರುತ್ತಿದ್ದ ಹಿರಿಯ ಸಾಹಿತಿಗಳ ಸಂಪರ್ಕದಿಂದ, 'ಕರ್ನಾಟಕ ಸಾಹಿತ್ಯ ಮಂದಿರ'ದ ಚಟುವಟಿಕೆಗಳಿಂದ ಹಿಗ್ಗುತ್ತ ನಡೆದಿದ್ದ ನನ್ನ ಸಂವೇದನಾವಲಯ ವಿಶ್ವವಿದ್ಯಾಲಯ ಕರ್ನಾಟಕ ಸಂಘದ ಉಪಾಧ್ಯಕ್ಷನಾಗಲು ಇನ್ನಷ್ಟು ವಿಶಾಲವಾಯಿತು. ಸಂಘದ ಉದ್ಘಾಟನೆ ಆಚಾರ್ಯ ಶ್ರೀ ಅವರಿಂದ; ಕಾರ್ಯಕ್ರಮಗಳ ಶುಭಾರಂಭ ಮಹಾಸಾಹಿತಿ ಮಾಸ್ತಿಯವರಿಂದ. ಇಬ್ಬರೂ ನನಗೆ ಅಕ್ಕರತೆಯ ಅಮೃತ ಕುಡಿಸಿದರು. ಅದೇ ವರ್ಷ ಉಸ್ಮಾನಿಯಾ ವಿಶ್ವವಿದ್ಯಾಲಯದ ಆಶ್ರಯದಲ್ಲಿ ಅಖಿಲ ಭಾರತ ಓರಿಯೆಂಟಲ್ ಕಾನ್ಫರನ್ಸ್ ನಡೆಯಿತು. ನಾನೂ ಪ್ರತಿನಿಧಿಯಾಗಿ ಭಾಗವಹಿಸಿದೆ. ಕನ್ನಡ ವಿಭಾಗದಲ್ಲಿ 'ವಚನಕಾರರ ಶೈಲಿ' ಎಂಬ ಪ್ರಬಂಧವನ್ನು ಮಂಡಿಸಿ ಪ್ರೊ। ಎಸ್. ವಿ. ರಂಗಣ್ಣ, ಪ್ರೊ। ಕೆ. ವಿ. ರಾಘವಾಚಾರ್, ಪ್ರೊ। ಎಂ. ಎಚ್. ಕೃಷ್ಣ ಮೊದಲಾದವರ ಮೆಚ್ಚುಗೆ ಗಳಿಸಿದೆ; ಅದರ ಬಹುಭಾಷಾ ಕವಿ ಸಮ್ಮೇಳನದಲ್ಲಿ 'ಬೆಳಗು' ಎಂಬ ಕವಿತೆ ಹಾಡಿ ಕನ್ನಡೇತರ ಪ್ರತಿನಿಧಿಗಳ ಮೆಚ್ಚುಗೆಯನ್ನೂ ಗಳಿಸಿದೆ. ಮೂರು ದಿನ ಪಾಂಡಿತ್ಯದ ಪ್ರಪಂಚದಲ್ಲಿ ವಿಹರಿಸಿ ಅಖಿಲ ಭಾರತ ಖ್ಯಾತಿಯ ಅನೇಕ ಹಿರಿಯ ವಿದ್ವಾಂಸರ ಆಶೀರ್ವಾದ ಪಡೆದೆ.

ಬಿ.ಎ. ಪರೀಕ್ಷೆಯ ಫಲಿತಾಂಶ ನಿರೀಕ್ಷೆಯಂತೆ ಹೊರಬಿದ್ದಿತು. ಕನ್ನಡ, ಸಂಸ್ಕೃತ, ಇಂಗ್ಲಿಷ್‌ಗಳಲ್ಲಿ ಮತ್ತು ಒಟ್ಟಿನಲ್ಲಿ ಪ್ರಥಮ ಸ್ಥಾನ ಸಿಕ್ಕಿತ್ತು. ಸರ್ ಅಕ್ಬರ್ ಹೈದರಿ ಸುವರ್ಣ ಪದಕ ಕೇವಲ ಎರಡು ಅಂಕ ಕಡಮೆಯಾಗಿ ಕೈತಪ್ಪಿತ್ತು—ಅದೂ ಕನ್ನಡದಲ್ಲಿ ಕಡಮೆಯಾಗಿ. ಎಂ.ಎ. ತರಗತಿಗೆ ಸೇರೆಂದು ಮೂರೂ ವಿಭಾಗಗಳ ಮುಖ್ಯಸ್ಥರು ಕರೆದರು. ತಂದೆಯವರ ಅಪೇಕ್ಷೆಯಂತೆ ಎಲ್‌ಎಲ್.ಬಿ. ಸೇರಿದೆ. ಮೊದಲಸಲ ಅನುತ್ತೀರ್ಣತೆಯ ಅವಮಾನ ಸಹಿಸಿದೆ. ಎದೆಗೆಡದೆ ಖಾಸಗಿಯಾಗಿ ಕಟ್ಟಿದರಾಯಿತೆಂದು ಇಂಗ್ಲಿಷ್ ಎಂ.ಎ. ತರಗತಿಗೆ ಸೇರಿಕೊಂಡೆ. ಕೆಲವೇ ತಿಂಗಳುಗಳಲ್ಲಿ ತಹಸೀಲ್ದಾರರ ಹದಿನಾರು ಹುದ್ದೆಗಳಿಗೆ ಅರ್ಜಿಗಳನ್ನು ಆಹ್ವಾನಿಸಲಾಯಿತು. ಆ ಕಾಲದಲ್ಲಿ ಆ ಹುದ್ದೆ ನನ್ನಂಥವರಿಗೆ 'ಗಗನ ಕುಸುಮ ಪರಿಮಳದಿಂದತ್ತಿತ್ತ'ವೆಂದೇ ಹೇಳಬೇಕು. ಆದರೂ ಅಲ್ಲಿ ಏನು ನಡೆಯುವುದೆಂಬುದನ್ನು ನೋಡುವ ಚಪಲದಿಂದ ಅರ್ಜಿ ಹಾಕಿದೆ. ಮೊದಲ ಸುತ್ತಿಗೇ ಹಾರಿ ಹೋಗುವೆನೆಂದುಕೊಂಡಿದ್ದ ನನಗೆ ಐದು ಸುತ್ತುಗಳ ಸಂದರ್ಶನಗಳಲ್ಲಿಯೂ ಪಾರಾಗಿ ಆರನೆಯ ಸುತ್ತಿನಲ್ಲಿ ಆಯ್ಕೆಯಾದಾಗ ಆಶ್ಚರ್ಯವೋ ಆಶ್ಚರ್ಯ! ಗಣಿತ ವಿಜ್ಞಾನಗಳನ್ನು ಓದಿ ಡಾಕ್ಟರನೋ ಇಂಜನಿಯರನೋ ಆಗಬೇಕೆಂದಿದ್ದ ನನ್ನ ಇಚ್ಛೆ ಈಡೇರಲಿಲ್ಲ. ಎಂ.ಎ. ಓದಲೆಂದು ನನ್ನ ಪ್ರಾಧ್ಯಾಪಕರ ಇಚ್ಛೆ ಈಡೇರಲಿಲ್ಲ. ವಕೀಲನಾಗಲೆಂಬ ನನ್ನ ತಂದೆಯವರ ಇಚ್ಛೆ ಈಡೇರಲಿಲ್ಲ; ನಿಯತಿಯ ಇಚ್ಛೆ ಈಡೇರಿದ್ದಿತು. ಅದರ ಅಣಕವೇನೋ ಎಂಬಂತೆ ಅಂದೇ ನನ್ನ ಕರುಳಿನ ತಂಗಿ ಕಣ್ಣುಮುಚ್ಚಿದ್ದಳು.

ನನ್ನ ತಾಯಿಯ ಗೋಳಿನ ಕಟ್ಟೆಯೊಡೆಯಿತು. ಸೊಸೆಯನ್ನು ನೋಡಿ ಮಗಳ ಮರಣದ ದುಃಖವನ್ನು ಮರೆವೆ, ಬೇಗ ಮದುವೆಯಾಗು ಎಂದು ಹಲುಬಿದಳು. ಹಿಂದೊಮ್ಮೆ ಅವ್ವನ ಮಾತಿನಂತೆ ಮದುವೆಯಾಗದಿದ್ದುದೇ ಸಾಕು, ಈ ಸಲ ತಾಯಿಯ ಮಾತು ನಡೆಸಿಕೊಡಬೇಕೆಂದು ಧಾರವಾಡದ ಚರಂತಿ ಮಠದ ಗಿರಿಜೆಯ ಕೈ ಹಿಡಿದೆ. ಆಡಳಿತದ ನೊಗಕ್ಕೆ ಹೆಗಲು ಕೊಟ್ಟೆ. ನಾಂದೇಡದಿಂದ ಆರಂಭವಾಯಿತು ಸೇವಾ ಜೀವನ. ಅದರ ಬಳಿಯ ಗೋದಾವರೀ ತೀರದಲ್ಲಿ ನಿಂತಾಗ ಅದು ಪ್ರಾಚೀನ ಕರ್ನಾಟಕದ ಉತ್ತರಗಡಿ ಎಂಬ ನೃಪತುಂಗನ ನುಡಿ ನೆನಪಾಗಿ ನವಿರಾದೆ. ಮುಂದೆ ಕೊಡಗಿನ ಜಿಲ್ಲಾಧಿಕಾರಿಯಾಗಿ ಹೋದಾಗ ಅಂದಿನ ಇಡಿಯ ಕರ್ನಾಟಕವನ್ನು ಕಣ್ಣಾರೆ ಕಂಡ ಕೃತಾರ್ಥತೆ.

ನಾಂದೇಡ ಜಿಲ್ಲೆಯ ಲನೇಕ ಕಡೆಗಳಲ್ಲಿ ಕನ್ನಡ ಶಿಲಾಶಾಸನಗಳನ್ನು ಕಂಡು ನೃಪತುಂಗನ ನುಡಿ ನಿಜವೆನಿಸಿತು. ದೇಗಲೂರು ತಾಲೂಕಿನಲ್ಲಿ ಕನ್ನಡ ಹಳ್ಳಿಗಳನ್ನು ಕಂಡೆ. ಶಾಸನಗಳಿದ್ದ ಗ್ರಾಮಗಳ ಪಟ್ಟಿಮಾಡಿ ಪುರಾತತ್ವ ಇಲಾಖೆಯ ನಿರ್ದೇಶಕರಾಗಿದ್ದ ಡಾ। ಸಿ. ಶ್ರೀನಿವಾಸಾಚಾರ್ಯರಿಗೆ ಕಳಿಸಿದೆ. ಅವರು ಅವುಗಳ ಅಚ್ಚುಗಳನ್ನು ಸಂಗ್ರಹಿಸಿ ಪ್ರಕಟಿಸುವ ಸನ್ನಾಹದಲ್ಲಿದ್ದರು. ಅಷ್ಟರಲ್ಲಿ ರಾಜ್ಯಗಳ ಪುನರ್ರಚನೆಯಾಗಲು ಅವು ಮುಂದೆ

ಮುಂಬೈಯಲ್ಲಿ ಪ್ರಕಟವಾದುವು. ಅ.ನ.ಕೃ. ಅವರ ಪ್ರಿಯಮಿತ್ರ, ನನ್ನ ಷಡ್ಡಕ ಟಿ. ಡಿ. ಶಿವಲಿಂಗಯ್ಯನವರಿಗಾಗಿ ಪ್ರೇಮಚಂದರ 'ನಿರ್ಮಲಾ' ಕಾದಂಬರಿಯ ಭಾಷಾಂತರ ಮಾಡಿದೆ. ಅದು ಬೇರೊಬ್ಬರಿಂದ ಪ್ರಕಟವಾಗಲು ಮಾಡಿದ ಭಾಷಾಂತರ ವ್ಯರ್ಥವಾಯಿತು. ಅ.ನ.ಕೃ. ಬಹಳ ಹತ್ತಿರದವರಾಗಿದ್ದರು. ಅವರ ಅಪೇಕ್ಷೆಯ ಮೇರೆಗೆ ಅವರ ಪ್ರಗತಿಶೀಲ ಕವನ ಸಂಕಲನ 'ರಸಋಷಿ'ಗೆ ಮೂರು ಕವಿತೆ ಕಳಿಸಿದೆ. ಸಾಕಷ್ಟು ಕವಿತೆಗಳನ್ನು ಬರೆದೆ. ಮರಾಠಿ ಜಿಲ್ಲೆಯಾದುದರಿಂದ ಮರಾಠೀ ವಾಙ್ಮಯದ ಪರಿಚಯ ಪಡೆದೆ. ಅಲ್ಲಿಯ ಉರ್ದು ವಿದ್ವಾಂಸರ ಸಂಗ, ಉರ್ದು ಸಾಹಿತ್ಯದ ಆಳ, ಅಗಲಗಳನ್ನರಿಯಲು ನೆರವಾಯಿತು.

ಅಲ್ಲಿಂದ ಕಲಬುರ್ಗಿಗೆ ವರ್ಗ. ಭಾರತದ ಸ್ವಾತಂತ್ರ್ಯೋದಯ. ನಿಜಾಮರ ಸ್ವಾತಂತ್ರ್ಯ ಲಾಲಸೆ. ರಝಾಕಾರರ ಹಾವಳಿ. ಹೆಂಡತಿ ಮಕ್ಕಳನ್ನು ಪುಣೆಯಲ್ಲಿ ಗೌರಕ್ಕೊ ಇಂಚಲ ಮಠದ ಮನೆಯಲ್ಲಿರಿಸಿ, 'ನಿತ್ಯ ಜನನ–ನಿತ್ಯ ಮರಣ' ಸ್ಥಿತಿಯಲ್ಲಿ ದಿನ ಎಣಿಸಿದುದು, ಪೊಲೀಸ್ ಕಾರ್ಯಾಚರಣೆ, ರಝಾಕಾರ ಮುಖಂಡರ ಪಾಕಿಸ್ತಾನಕ್ಕೆ ಪಲಾಯನ, ಕಾರ್ಯಾಚರಣೆಗೆ ಮುಂಚೆ ಹಿಂದುಗಳ ಗೋಳಾಟ. ಆ ಮೇಲೆ ಬಡ ಮುಸಲ್ಮಾನರ ಗೋಳಾಟ. ಈ ಎರಡು ಪ್ರಸಂಗಗಳಲ್ಲೂ ಕೆಲವರಿಗೆ ಆಶ್ರಯ ನೀಡಿದ ನೆಮ್ಮದಿ, ಕನ್ನಡ ಸಾಹಿತ್ಯ ಪರಿಷತ್ತಿನ ಅಪೇಕ್ಷೆಯ ಮೇರೆಗೆ ಕಲಬುರಗಿಯಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ನಡೆಸಲು ನನ್ನ ಅಧ್ಯಕ್ಷತೆಯಲ್ಲಿ ಸ್ವಾಗತ ಸಮಿತಿಯ ರಚನೆ, ಅನುಭಾವಿಗಳಾದ ಉತ್ತಂಗಿ ಚೆನ್ನಪ್ಪನವರ ಅಧ್ಯಕ್ಷತೆಯಲ್ಲಿ ಅಪೂರ್ವ ಸಂಭ್ರಮ ವೈಭವಗಳೊಡನೆ ಸಮ್ಮೇಳನ. ಜೊತೆಗೆ ಕೆ. ಬಿ. ಜಿನರಾಜ ಹೆಗಡೆ ಅವರ ಅಧ್ಯಕ್ಷತೆಯಲ್ಲಿ ಕರ್ನಾಟಕ ಏಕೀಕರಣ ಸಮ್ಮೇಳನ. ಜನನಾಯಕ ಎಸ್. ನಿಜಲಿಂಗಪ್ಪನವರು, ಟಿ. ಸುಬ್ರಹ್ಮಣ್ಯ ಅವರು, ಹಳ್ಳಿಕೇರಿ ಗುದ್ಲೆಪ್ಪನವರು, ತಿ. ರು. ನೇಸ್ವಿ, ವೆಂಕಟೇಶ ಮಾಗಡಿ ಮೊದಲಾದ ಮುಖಂಡರ ಮತ್ತು ಅನೇಕ ಹಿರಿಕಿರಿ ಸಾಹಿತಿಗಳ ಸಂಪರ್ಕ, ಪದೋನ್ನತಿ, ಹೈದರಾಬಾದಿಗೆ ವರ್ಗ–ಎಲ್ಲ ಮಿಂಚಿನಂತೆ ಮೂಡಿ ಮಾಯವಾದ ಮಹದ್ಘಟನೆಗಳು. ಇವುಗಳ ವಿವರಣೆಗೆ ಲೇಖನವೇಕೆ, ಪುಸ್ತಕಗಳೂ ಸಾಲವು.

1948ರಿಂದ 1955ರ ವರೆಗೆ ಹೈದರಾಬಾದಿನಲ್ಲಿ ಭೂಮಾಪನ ಮತ್ತು ಕಂದಾಯ ಇಲಾಖೆಗಳಲ್ಲಿಯೂ ಇಬ್ಬರು ಮಂತ್ರಿಗಳ ಆಪ್ತ ಕಾರ್ಯದರ್ಶಿಯಾಗಿಯೂ ಸೇವೆ. ದೇಶಾಭಿಮಾನಕ್ಕೆ, ಭಾಷಾಭಿಮಾನಕ್ಕೆ ಉಕ್ಕು ಬಂದ ಕಾಲ. ಕರ್ನಾಟಕ ಸಾಹಿತ್ಯ ಮಂದಿರದ ಕಾರ್ಯದರ್ಶಿಯಾಗಿ, ನಾಡಹಬ್ಬ ಸಮಿತಿಯ ಕಾರ್ಯದರ್ಶಿಯಾಗಿ, ಹೈದರಾಬಾದು ಪ್ರದೇಶ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷನಾಗಿ, ಕರ್ನಾಟಕಾಂಧ್ರ ಭಾಷಾ ಬಾಂಧವ್ಯ ಗೋಷ್ಠಿಗಳ ಸಂಚಾಲಕನಾಗಿ, ನಗರ ಹಿಂದೀ ಪ್ರೇಮೀ ಮಂಡಳಿಯ ಅಧ್ಯಕ್ಷನಾಗಿ ಹಗಲಾವುದೋ ಇರುಳಾವುದೋ ಎಂಬಂತೆ ದುಡಿದೆ. ಬೀದರ ಜಿಲ್ಲೆಯಲ್ಲಿ ಕನ್ನಡವನ್ನು ಉಳಿಸಲು ಮಾಡಿದ ಉಗ್ರವ್ಯಾಪಕ ಹೋರಾಟ, ಪ್ರದೇಶ ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ಹೈದರಾಬಾದು ಕರ್ನಾಟಕದ ಮೂರೂ ಜಿಲ್ಲೆಗಳಲ್ಲಿ ತೀವ್ರವಾದ ಕನ್ನಡ ಚಟುವಟಿಕೆಗಳು, ಕರ್ನಾಟಕ ಸಾಹಿತ್ಯ ಮಂದಿರದ ಸ್ವಂತ ಕಟ್ಟಡದ ಕಾರ್ಯಾರಂಭ. 'ಶ್ರೀಕಾರ' 'ಪ್ರಬಂಧಮಾಲೆ' ಮೊದಲಾದ ಪ್ರಕಟನೆಗಳು. 'ನ ಭೂತೋ ನ ಭವಿಷ್ಯತಿ' ಎಂಬಂತೆ ನಾಡಹಬ್ಬಗಳ ಆಚರಣೆ, ಪ್ರದೇಶ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಕನ್ನಡ ಸಾಹಿತ್ಯ ಪರೀಕ್ಷೆಗಳ ಆಯೋಜನೆ, ಅವುಗಳಿಗಾಗಿ ಕನ್ನಡ ಪದ್ಯ ರತ್ನಾಕರ, ಕವಿತಾವಲಿ, ಕಥಾವಲಿ ಮುಂತಾದ ಪುಸ್ತಕಗಳ ಪ್ರಕಟನೆ. ಬೇಂದ್ರೆಯವರ ಬೆಲೆಯುಳ್ಳ ಮುನ್ನುಡಿಯೊಡನೆ ನನ್ನ ಪ್ರಥಮ ಕವನ ಸಂಗ್ರಹ 'ಜಲಪಾತ'ದ ಪ್ರಕಟನೆ, ನನ್ನ ತಮ್ಮ ಅನ್ನದಾನಿಯ ಸಂಪಾದಕತ್ವದಲ್ಲಿ 'ಸಹಜೀವನ ಸಾಹಿತ್ಯಮಾಲೆ'ಯ ಪ್ರಾರಂಭ, ಅದರಲ್ಲಿ ಮಾನ್ವಿ ನರಸಿಂಗ ರಾಯರ 'ಸಂಸಾರ ನೀತಿ' ನನ್ನ 'ತುಷಾರ ಹಾರ' ಮತ್ತು 'ಕರುಣಾ ಶ್ರಾವಣ' ಹಾಗೂ ಅನ್ನದಾನಿ ಸಂಪಾದಿಸಿದ 'ಚನ್ನಬಸವ ಸಾಹಿತ್ಯ'ಗಳ ಪ್ರಕಟನೆ, ಮಂತ್ರಿಗಳೊಡನೆ ದೆಹಲಿ, ಹೃಷಿಕೇಶ, ಹರಿದ್ವಾರ, ಕಾಶ್ಮೀರ, ಉಜ್ಜಯನಿ, ಮದ್ರಾಸ್ ಮತ್ತಿತರ ಮಹತ್ವದ ಸ್ಥಳಗಳಿಗೆ ಪ್ರವಾಸ, ಅಲ್ಲಿ ಪ್ರತಿಭಾಶಾಲಿಗಳ ಪರಿಚಯ, ಬೇರೆ ಬೇರೆ ಭಾಷೆಗಳ ಸಾಹಿತ್ಯಗಳ ಸಂಪರ್ಕ, ಬಿಡುವಿನ ವೇಳೆಯಲ್ಲಿ ಸಾಹಿತ್ಯ ಸೃಷ್ಟಿ. ಜನರಿಗೆ ನೆರವಾಗುವ ಅವಕಾಶಗಳ ಸದುಪಯೋಗ, ಆಕಾಶವಾಣಿಯ ನಾಟಕಗಳಲ್ಲಿ, ಕವಿ ಸಮ್ಮೇಳನಗಳಲ್ಲಿ, ಸಂವಾದಗಳಲ್ಲಿ ಸಹಭಾಗಿತ್ವ, ಅಲ್ಲಿಗೆ ಆಗಮಿಸುತ್ತಿದ್ದ ಅ.ನ.ಕೃ., ಕಾರಂತ, ಬೀಚಿ, ವೀಸಿ, ತೀನಂಶ್ರೀ, ದೋಲನ, ರಾಜರತ್ನಂ, ಮಾಸ್ತಿ, 'ಶ್ರೀ' ಮೊದಲಾದ ಮಹನೀಯರಿಂದ ಅರಿವಿನ ಪರಿಧಿಯ ವಿಸ್ತರಣೆ–ಇನ್ನು ಏನೇನೋ.

ನನ್ನ ಗ್ರಹಿಕೆಯಂತೆ ಮೂರು ಮಹತ್ತರ ದಿನಗಳಲ್ಲಿ ಮೂರನೆಯದು–ಕರ್ನಾಟಕ ರಾಜ್ಯೋದಯ ದಿನ ಬಂದಿತು. ಭಾರತದ ಸ್ವಾತಂತ್ರ್ಯೋದಯ ದಿನ, ಹೈದರಾಬಾದಿನ ಪೊಲೀಸ್ ಕಾರ್ಯಾಚರಣೆಯ ದಿನ ಇನ್ನೆರಡು ದಿನಗಳು. ಉತ್ಸಾಹ ಉಕ್ಕೇರಿ 'ಹೊತ್ತಿತೋ ಹೊತ್ತಿತು ಕನ್ನಡದ ದೀಪ' ಎಂಬ ಕವಿತೆ ಬರೆದೆ. ಬಹಳ ಹಿಂದೆ ಬರೆದ 'ಕನ್ನಡದ ದೀಪವದು ಕಾಣದಿಹುದು' ಎಂಬ ಕವಿತೆ, ಈ ಕವಿತೆ ತುಂಬ ಜನಪ್ರಿಯವಾದುವು. ನಾನಾಗ ಯಾದಗಿರಿಯಲ್ಲಿ ಡೆಪ್ಯುಟಿ ಕಲೆಕ್ಟರ್ ಮತ್ತು ಪಿ.ಈ.ಓ. ಆಗಿದ್ದೆ. ತುಂಬ ಕೆಲಸಮಾಡಿ ಸಾಕಷ್ಟು ಹೆಸರು ಗಳಿಸಿದ್ದೆ. ಮತ್ತೆ ಅಣ್ಣಾರಾವ್ ಗಣಮುಖಿಯವರು ಮಂತ್ರಿಗಳಾಗಲು ನನ್ನನ್ನು ಬೆಂಗಳೂರಿಗೆ ಎಳೆದರು. ಬೆಂಗಳೂರಿನ ವಿಧಾನಸೌಧದಲ್ಲಿ ಶಿಕ್ಷಣ ಇಲಾಖೆಯ ಅಧೀನ ಕಾರ್ಯದರ್ಶಿ, ಉಪಕಾರ್ಯದರ್ಶಿಯಾಗಿ ಎಲ್ಲರೂ ಮೆಚ್ಚುವಂತೆ ಕೆಲಸಮಾಡಿ ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆಯ ನಿರ್ದೇಶಕನಾದೆ; ಅಲ್ಲಿಂದ ಹಣಕಾಸಿನ ಇಲಾಖೆಯ ಉಪಕಾರ್ಯದರ್ಶಿ ಮತ್ತು ಸುವರ್ಣ ನಿಯಂತ್ರಣಾಧಿಕಾರಿ, ಕೊಡಗಿನ ಜಿಲ್ಲಾಧಿಕಾರಿ, ಸಾರಿಗೆ ಕಮಿಷನರ್, ಬೆಳಗಾವಿಯ ಜಿಲ್ಲಾಧಿಕಾರಿ ಮತ್ತು ಕಾರ್ಮಿಕ ಕಮಿಷನರ್ ಆಗಿ ಕೆಲಸ ಮಾಡಿ 1976ರಲ್ಲಿ ನಿವೃತ್ತನಾದೆ. ಎಲ್ಲ ಇಲಾಖೆಗಳಲ್ಲಿಯೂ ಯಶಸ್ವಿಯಾಗಿ ಕೆಲಸ ಮಾಡಿದ ಸುಕೃತ ನನ್ನದು. ಇಲ್ಲೆಲ್ಲ ಮಾಡಿದ ಮುಖ್ಯ ಕಾರ್ಯಗಳ ಉಲ್ಲೇಖನಕ್ಕೂ ಸ್ಥಳಾವಕಾಶವಿಲ್ಲವಾಗಿ ಅದನ್ನು ಬಿಟ್ಟು ನನಗೆ ತೃಪ್ತಿಯನ್ನು ನೀಡಿದ ಕೆಲವು ಕಾರ್ಯಗಳನ್ನು ಮಾತ್ರ ವಿವರಿಸಬಯಸುವೆ. ಯಾದಗಿರಿ ಉಪವಿಭಾಗದಲ್ಲಿ ಮಾಡಿದ ಗ್ರಾಮಾಭಿವೃದ್ಧಿ ಕಾರ್ಯಗಳು, ಶಿಕ್ಷಣ ಇಲಾಖೆಯಲ್ಲಿದ್ದು ಮಾಡಿದ ಪಂಚವಾರ್ಷಿಕ ಯೋಜನಾ ಕಾರ್ಯಗಳು,

## ಕುರುಡು

ನೆನಪಿನ
ಕನ್ನಡಿ
ಕುರುಡಾದ
ಮ್ಯಾಗ
ಗುರುತಿನ
ಮಾರಿ
ಪ್ರಜ್ವಲಿಸೀತು
ಹ್ಯಾಂಗ!

● ಡಿ. ವಿ. ಬಡಿಗೇರ

## ಮಿಡಿ

ಮಂಗಳೂರಿನ
ಹುಡುಗಿಯರೇನು ಮಹಾ ಬಿಡಿ,
ನನ್ನಜ್ಜಿಯೂ ಹಾಕುತ್ತಾಳೆ
ಮಿಡಿ
ಉಪ್ಪಿನಕಾಯಿ!

● ಗೋಪಾಲ್, ಮಂಗಳೂರು

## ವಿಸ್ಮಯ

ಕೆಟ್ಟು ಹೋಗಿದೆ
ಸರಿಪಡಿಸಲಾಗದೆಂದು
ಯಾರೋ ಅಟ್ಟ ಹತ್ತಿಸಿ
ಮೂಲೆಯಲ್ಲಿ ಕೂರಿಸಿದ್ದ
ನಮ್ಮ ತಾತನ ಕಾಲದ
ಗಡಿಯಾರ,
ದಿನಕೆರಡು ಬಾರಿ
ನಿಖರ ಸಮಯವ
ತೋರಿಸುವುದು ಕಂಡು
ವಿಸ್ಮಯಗೊಳ್ಳುತ್ತೇನೆ.

● ಕೃಷ್ಣ ರೋಣೂರು

ಪ್ರವಾಸೋದ್ಯಮಾಭಿವೃದ್ಧಿ ಕಾರ್ಯಗಳು, ಸುವರ್ಣನಿಯಂತ್ರಣ ಕಾನೂನಿನಿಂದ ಸಂತ್ರಸ್ತರಾಗಿದ್ದ ಸುವರ್ಣಕಾರರ ಪುನರ್ವಸತಿ ಕಾರ್ಯ, ಕೊಡಗಿನಲ್ಲಿ ಪ್ರಾರಂಭಿಸಿದ ಬೇಸಿಗೆ ಬೆಳೆಯ ಆಂದೋಲನ, ಸ್ಥಳೀಯ ವಿಲೇವಾರಿ ಅಭಿಯಾನ, ಪಾಕಿಸ್ತಾನದೊಡನಾದ ಯುದ್ಧದಲ್ಲಿ ಮಡಿದ ಯೋಧರ ಕುಟುಂಬಗಳ ಕಲ್ಯಾಣ ಕಾರ್ಯಗಳು, ಸಾರಿಗೆ ಇಲಾಖೆಯಲ್ಲಿ ಮಾಡಿದ ಸುಧಾರಣೆಗಳು, ಬೆಳಗಾವಿ ಜಿಲ್ಲೆಯಲ್ಲಿ ಮಾಡಿದ ಬಳ್ಳಾರಿ ನಾಲೆಯ ಕಾರ್ಯ, ಮಲಪ್ರಭಾ ಜಲಾಶಯದಲ್ಲಿ ಮುಳುಗಿದ ಹದಿನೇಳು ಹಳ್ಳಿಗಳ ಜನರ ಪುನರ್ವಸತಿ ಕಾರ್ಯ, ಬಂಗ್ಲಾ ಯುದ್ಧದಲ್ಲಿ ಮಡಿದ ವೀರರ ಪರಿವಾರಗಳಿಗೆ ನೆರವು ನೀಡಿದ ಕಾರ್ಯ, ಮಲಪ್ರಭಾ ಸಕ್ಕರೆ ಕಾರ್ಖಾನೆಯ ಕಾರ್ಯ, ಬರಗಾಲ ಪರಿಹಾರ ಕಾರ್ಯಗಳು, ಕಾರ್ಮಿಕ ಇಲಾಖೆಯಲ್ಲಿ ಮಾಡಿದ ಸುಧಾರಣೆಗಳು, ಕಾರ್ಮಿಕ ಕಲ್ಯಾಣ ನಿಧಿಯ ಸ್ಥಾಪನೆ, ಅನೇಕ ಅಸಂಘಟಿತ ಕಾರ್ಮಿಕ ವರ್ಗಗಳಿಗೆ ಕನಿಷ್ಠ ವೇತನ ನಿಗದಿ ಮಾಡಿದುದು, ಅದೇ ಕಾಲಕ್ಕೆ ಭಾರತ ಸರಕಾರದ ಗಣಿ ಕಾರ್ಮಿಕರ ವೆಲ್ಫೇರ್ ಕಮೀಷನರನಾಗಿ ಕರ್ನಾಟಕ, ತಮಿಳುನಾಡು ಮತ್ತು ಆಂಧ್ರಪ್ರದೇಶಗಳಲ್ಲಿ ಹತ್ತಾರು ಸಾವಿರ ಕಾರ್ಮಿಕ ವಸತಿ ಗೃಹಗಳ ನಿರ್ಮಾಣ, ಸಂಚಾರೀ ಆಸ್ಪತ್ರೆಗಳ ಆರಂಭ, ಕುಡಿಯುವ ನೀರಿನ ಪೂರೈಕೆ, ಅವರ ಮಕ್ಕಳಿಗೆ ವಿದ್ಯಾರ್ಥಿವೇತನ ಇತ್ಯಾದಿ ಕಾರ್ಯಗಳು ಕೊನೆಯಲ್ಲಿ ರಾಜ್ಯ ಸಚಿವ ಸಂಪುಟದ ಪ್ರಶಂಸಾ ಪತ್ರ!

ಆಡಳಿತದಲ್ಲಿದ್ದಾಗ ಅವಕಾಶವಿಲ್ಲದೆ ಜಂಬೂ ಸವಾರಿಯಂತೆ ನಡೆದಿದ್ದ ಕೃತಿ ರಚನಾಕಾರ್ಯ ನಿವೃತ್ತಿಯ ನಂತರ ಅಶ್ವವೇಗದೊಡನೆ ಮುಂದುವರೆಯಿತು. ಸೇವಾವಧಿಯಲ್ಲಿ ಪ್ರಕಟವಾದ ಕೃತಿಗಳೆಂದರೆ ಮೂರನೆಯ ಕವನ ಸಂಗ್ರಹ 'ಮಾನಸ ಸರೋವರ', ರೇಡಿಯೋ ನಾಟಕಗಳ ಸಂಗ್ರಹ 'ರಜತರೇಖೆ', ಚೀಣಿಯರ ಆಕ್ರಮಣದಿಂದ ಪ್ರೇರಿತನಾಗಿ ಬರೆದ ನಾಟಕ 'ಭಾರತವೀರ', 'ಶರಣ ಚರಿತಾಮೃತ', 'ಕಲ್ಲೋಲಮಾಲೆ' ಮತ್ತು 'ಮೊದಲು ಮಾನವನಾಗು' ಎಂಬ ಕವನ ಸಂಗ್ರಹಗಳು ಹಾಗೂ 'ತ್ರಿಭುವನಮಲ್ಲ' ಎಂಬ ಐತಿಹಾಸಿಕ ಕಾದಂಬರಿ. ಇವುಗಳಲ್ಲಿ 'ಮಾನಸ ಸರೋವರ'ಕ್ಕೆ ಕರ್ನಾಟಕ ಸರಕಾರದ ಪುರಸ್ಕಾರ ದೊರೆಯಿತು; 'ಭಾರತವೀರ' ಮತ್ತು 'ತ್ರಿಭುವನ ಮಲ್ಲ'ಗಳು ಪಠ್ಯ ಪುಸ್ತಕಗಳಾದವು. 'ಶರಣ ಚರಿತಾಮೃತ' ತುಂಬ ಜನಪ್ರಿಯವಾಗಿ ಈಗ ಮೂರನೆಯ ಮುದ್ರಣವನ್ನು ಕಾಣಲಿದೆ; 'ಕಲ್ಲೋಲ ಮಾಲೆ' 'ಮೊದಲು ಮಾನವನಾಗು' ಓದುಗರ ಮೆಚ್ಚಿಕೆಗಳಿಸಿದುವು.

ನಾನು ನಿವೃತ್ತನಾಗುತ್ತಲೇ 1977ರ ಸಾರ್ವತ್ರಿಕ ಚುನಾವಣೆಯಲ್ಲಿ ಲೇಖಕರ ಒಕ್ಕೂಟ ಕೊಟ್ಟ ಕರೆಗೆ ಓಗೊಟ್ಟು ಚಿತ್ರದುರ್ಗ ಜಿಲ್ಲೆಯಲ್ಲಿ ಜನತಾಪಕ್ಷವನ್ನು ಬೆಂಬಲಿಸಿ ಭಾಷಣ ಮಾಡುತ್ತಾ ಅಲೆಯಬೇಕಾಯಿತು. ಚಿತ್ರದುರ್ಗದಲ್ಲಿ ದಿ. ಅಶೋಕ ಮೆಹ್ತಾ ಅವರು ಭಾಷಣ ಮಾಡಿದ ಸಭೆಗೆ ನಾನೇ ಅಧ್ಯಕ್ಷನಾಗಬೇಕಾಯಿತು; ದಿ. ಸಾದಿಕ್ ಅಲಿಯವರ ಉರ್ದು ಭಾಷಣವನ್ನೂ ಕನ್ನಡಕ್ಕೆ ಭಾಷಾಂತರಿಸಬೇಕಾಯಿತು; ಹೊಸದುರ್ಗದಲ್ಲಿ ಜನನಾಯಕ ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ಭಾಷಣ ಮಾಡಬೇಕಾಯಿತು; ಚಳ್ಳಕೆರೆಯಲ್ಲಿ ಸಿ. ಆರ್. ಬಸಪ್ಪನವರೊಡನೆ ವೇದಿಕೆಯನ್ನು ಹಂಚಿಕೊಳ್ಳಬೇಕಾಯಿತು. ಎಲ್ಲೆಡೆಗೂ ಜನತಾಪಾರ್ಟಿಯ ಅಭ್ಯರ್ಥಿ ದಿ. ಹಿ. ಚಿ. ಬೋರಯ್ಯನವರಿಗೆ ಪ್ರಚಂಡ ಬೆಂಬಲ! ಆದರೂ ಅವರು ಸೋತುದು 'ಅದೃಶ್ಯ ಮತದಾರ'ರಿಂದ!


ಗೆಳೆಯರಾದ ಗೋಪಾಲಕೃಷ್ಣ ಅಡಿಗ, ಜಿ. ಎಸ್. ಎಸ್., ಚಿದಾನಂದಮೂರ್ತಿ, ಜಿ. ನಾರಾಯಣ ಮೊದಲಾದವರ ಒತ್ತಾಯಕ್ಕೆ ಒಳಗಾಗಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಲು ಡಾ। ದೇಜಗೌ ಅವರನ್ನು ಒಪ್ಪಿಸಿದೆ. ಅವರಿಗೆ ಎಲ್ಲೆಡೆಗೆ ಸಂಭ್ರಮದ ಬೆಂಬಲ ಸಿಕ್ಕರೂ ಅವರೂ ಸೋತರು. ಏಕೆ ಎಂಬುದು ಎಲ್ಲರಿಗೂ ತಿಳಿದ ವಿಷಯ.

ಶ್ರೀ ವೀರೇಂದ್ರ ಪಾಟೀಲರು, ಪೂಜ್ಯ ಸಿದ್ಧಗಂಗಾ ಶ್ರೀಗಳು, ಪೂಜ್ಯ ಸುತ್ತೂರ ಶ್ರೀಗಳು ಅವರಿಗಿತ್ತ ವಚನದಂತೆ ಒಂದು ವರ್ಷ 'ಲೋಕವಾಣಿ'ಯ ಗೌರವ ಸಂಪಾದಕನಾಗಿ ದುಡಿದು ಅದನ್ನು ಮತ್ತೆ ಸುಸ್ಥಿತಿಗೆ ತಂದುಕೊಟ್ಟೆ.

ಶ್ರೀ ಬಿ. ಡಿ. ಜತ್ತಿ, ಶ್ರೀ ಎಸ್. ಎಸ್. ಮಳಿಮಠ, ಶ್ರೀ ಎ. ಸಿ. ದೇವೇಗೌಡರ ಒತ್ತಾಯಕ್ಕೆ ಒಳಗಾಗಿ ಬಸವ ಸಮಿತಿಯಲ್ಲಿ ಹದಿನೈದು ವರ್ಷಕಾಲ 'ಬಸವ ಪಥ' 'ಬಸವ ಜರ್ನಲ್'ಗಳ ಪ್ರಧಾನ ಸಂಪಾದಕನಾಗಿ, 'ಸಂಶೋಧನ–ಪ್ರಕಟನ ವಿಭಾಗದ' ನಿರ್ದೇಶಕನಾಗಿ, ಕೋಶಾಧ್ಯಕ್ಷನಾಗಿ, ಉಪಾಧ್ಯಕ್ಷನಾಗಿ ತ್ರಿಕರಣಶುದ್ಧಿಯಿಂದ ದುಡಿದು ಅಲ್ಲಿಯ ಕಾರ್ಮಿಕ ವಿರೋಧಿ ನೀತಿಯಿಂದ ರೋಸಿ, ಅವ್ಯವಹಾರಗಳಿಗೆ ಹೇಸಿ ರಾಜೀನಾಮೆ ನೀಡಿ ಹೊರಗೆಬಂದೆ. ಕನ್ನಡ ನಿಘಂಟು ಸಮಿತಿಯ, ಜ್ಞಾನಗಂಗೋತ್ರಿ ಸಂಪಾದಕ ಸಮಿತಿಯ, ಕೇಂದ್ರ ರಾಜ್ಯಗಳ ಸಾಹಿತ್ಯ ಅಕಾಡಮಿಗಳ, ಪಠ್ಯ ಪುಸ್ತಕ ಸಮಿತಿಗಳ ಸದಸ್ಯನಾಗಿ, ಅಧ್ಯಕ್ಷನಾಗಿ ದುಡಿದಿದ್ದೇನೆ. 'ಶಂ. ಬಾ. ಜೋಶಿ ಸನ್ಮಾನ ಸಮಿತಿ', 'ಹುಕ್ಕೇರಿ ಬಾಳಪ್ಪ ಸನ್ಮಾನ ಸಮಿತಿ'ಗಳ ಅಧ್ಯಕ್ಷನಾಗಿ ಸೇವೆ ಸಲ್ಲಿಸಿದೆ. ಲೋಕಸೇವಾ ಆಯೋಗದ ಪರೀಕ್ಷೆಗಳಲ್ಲಿ ಕನ್ನಡಕ್ಕೆ ಸ್ಥಾನದೊರಕಿಸಿಕೊಡಲು ದೇಜಗೌ ಅವರೊಡನೆ ಉಪವಾಸ ಸತ್ಯಾಗ್ರಹ ಮಾಡಿದೆ. ಗೋಕಾಕ ಚಳುವಳಿಯಲ್ಲಿ ಸಕ್ರಿಯ ಭಾಗವಹಿಸಿದೆ. ಸೇವಾ ಜೀವನದಲ್ಲಿ ಹೋಗಲು ಸಾಧ್ಯವಾಗದಿದ್ದ ಕನ್ನಡ ಸಂಘ ಸಂಸ್ಥೆಗಳಿಗೆ, ಶಾಲೆ ಕಾಲೇಜುಗಳಿಗೆ, ಕಾರ್ಖಾನೆಗಳಿಗೆ ಹೋಗಿ ಕನ್ನಡ ಕೈಂಕರ್ಯ ಸಲ್ಲಿಸಿ ಬಂದೆ; ಇಂದಿಗೂ ಕನ್ನಡದ ಯಾವ ಕಾರ್ಯವಿದ್ದರೂ ಕೈಗೂಡಿಸುತ್ತಲಿದ್ದೇನೆ. ಕೊನೆಯ ನಿರ್ಣಾಯಕ ಕನ್ನಡ ಹೋರಾಟಕ್ಕಾಗಿ ಕನ್ನಡಿಗರನ್ನು ಹುರಿದುಂಬಿಸುತ್ತಿದ್ದೇನೆ.

ನಿವೃತ್ತಿಯ ನಂತರದ ನನ್ನ ಪ್ರಕಟಿತ ಕೃತಿಗಳಿವು: ವಚನೋದ್ಯಾನ, ವಚನ ನಂದನ, ತುಷಾರಹಾರ, ಬಸವಣ್ಣನವರ ಜೀವನ ಹಾಗೂ ಸಂದೇಶ, ಮಹಾದೇವಿ, ಅಲ್ಲಮ ಪ್ರಭು, ಚಿಂತನ ಲಹರಿ, ಚರಗ, ಹಾಲ್ಜೇನೆ, ಮಿರ್ಜಾಗಾಲಿಬ್, ನಜೀರ್ ಅಕಬರಾಬಾದಿ, ಗ್ರಾಮ ಸ್ವರಾಜ್ಯ, ಭಗ್ನ ನೂಪುರ, ಮರುಳ ಸಿದ್ದನ ಕಂತೆ–ಇತ್ಯಾದಿ. ಇವುಗಳಲ್ಲಿ 'ವಚನೋದ್ಯಾನ'ಕ್ಕೆ ಕಲಕತ್ತೆಯ ಭಾರತೀಯ ಭಾಷಾ ಪರಿಷತ್ತಿನ ಪುರಸ್ಕಾರ, ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿಯ ವರ್ಷದ ಶ್ರೇಷ್ಠ ಪುಸ್ತಕ ಪುರಸ್ಕಾರ, ಕರ್ನಾಟಕ ವಿಶ್ವವಿದ್ಯಾಲಯದ ಪ್ರೊ. ಮಾಳವಾಡ ಪುರಸ್ಕಾರಗಳು ದೊರೆತಿವೆ. 'ವಚನ ನಂದನ'ಕ್ಕೆ ಹುಬ್ಬಳ್ಳಿಯ ಮೂರು ಸಾವಿರ ಮಠದ ಪುರಸ್ಕಾರ ದೊರಕಿದೆ. ವಚನೋದ್ಯಾನದ ಹಿಂದೀ, ಮರಾಠಿ ಅನುವಾದಗಳು ಪ್ರಕಟವಾಗಿದ್ದು ಫ್ರೆಂಚ್ ಅನುವಾದ ಪ್ರಕಟವಾಗಲಿದೆ; ನೂರು ವಚನಗಳ ಇಂಗ್ಲಿಷ್ ಅನುವಾದ ಪ್ರಕಟವಾಗಿದೆ. 'ತುಪ್ಪಾರೊಟ್ಟಿ ಗೇ ಗೇ ಗೇ', 'ಗಿಲ್ ಗಿಲ್ ಗಿಲಗಚ್ಚಿ', 'ತಿರುಗಲೆ ತಿರುಗಲೆ ತಿರುಗುಮ್ಯಾಲೆ', 'ಭಾರತವೆಲ್ಲಕ್ಕೆ ಬಾವುಟವೊಂದೇ' ಇವು ನನ್ನ ಮಕ್ಕಳ ಪದ್ಯ ಸಂಗ್ರಹಗಳು. ಮೊದಲಿನದಕ್ಕೆ ಭಾರತ ಸರಕಾರದ ಪುರಸ್ಕಾರ ಬಂದಿದೆ. ಮಕ್ಕಳ ನಾಟಕ 'ನ್ಯಾಯನಿರ್ಣಯ' ಜನಪ್ರಿಯವಾಗಿದೆ. 'ಮಕ್ಕಳ ಲೋಕಸಂಚಾರ' ಮಕ್ಕಳಿಗಾಗಿ ಬರೆದ ಪ್ರವಾಸ ಸಾಹಿತ್ಯ.

ಕನ್ನಡ ಕುಲಬಾಂಧವರಿಂದ ನಾನು ಪಡೆದ ಮನ್ನಣೆ ವರ್ಣನಾತೀತವಾದುದು. ಅಂತೆಯೇ ಹರಪನಹಳ್ಳಿಯ ಸಾಹಿತ್ಯ ಸಮ್ಮೇಳನದಲ್ಲಿ 'ಸಾಹಿತ್ಯ ಗೋಷ್ಠಿ'ಯ ಅಧ್ಯಕ್ಷತೆ, ಮೈಸೂರಿನ ಸಾಹಿತ್ಯ ಸಮ್ಮೇಳನದಲ್ಲಿ 'ಲೇಖಕರ ಗೋಷ್ಠಿ'ಯ ಅಧ್ಯಕ್ಷತೆ, ಬೀದರ ಸಾಹಿತ್ಯ ಸಮ್ಮೇಳನದಲ್ಲಿ 'ಕವಿಗೋಷ್ಠಿ'ಯ ಅಧ್ಯಕ್ಷತೆ, ದೆಹಲಿ ಸಾಹಿತ್ಯ ಸಮ್ಮೇಳನದಲ್ಲಿ 'ಕನ್ನಡ ಭವಿತವ್ಯ ಗೋಷ್ಠಿ'ಯ ಅಧ್ಯಕ್ಷತೆ, ರಾಯ್ಚೂರು, ಕೊಡಗು ಜಿಲ್ಲೆಗಳ ಜಿಲ್ಲಾ ಸಾಹಿತ್ಯ ಸಮ್ಮೇಳನಗಳ ಅಧ್ಯಕ್ಷತೆ, ನವಿಲುಗುಂದದಲ್ಲಿ ನಡೆದ ಸರ್ವಧರ್ಮ ಸಮ್ಮೇಳನ ಮತ್ತು ವಚನ ಸಾಹಿತ್ಯ ಸಮ್ಮೇಳನಗಳ ಅಧ್ಯಕ್ಷತೆ, ಧರ್ಮಸ್ಥಳದ ಸಾಹಿತ್ಯ ಸಮ್ಮೇಳನ





ಹಾಗೂ ಧರ್ಮ ಸಮ್ಮೇಳನಗಳ ಅಧ್ಯಕ್ಷತೆ, ಹೊಂಬುಜದಲ್ಲಿ ನಡೆದ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ, ಎಡೆಯೂರಿನಲ್ಲಿ ನಡೆದ ಸರ್ವಧರ್ಮ ಸಮ್ಮೇಳನದ ಅಧ್ಯಕ್ಷತೆ, ಮೈಸೂರಿನ ದಸರಾ ಕವಿ ಸಮ್ಮೇಳನದ ಅಧ್ಯಕ್ಷತೆ, 1987ರಲ್ಲಿ ಕಲಬುರುಗಿಯಲ್ಲಿ ಜರುಗಿದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ನನಗೆ ದೊರೆತುವು—ಅವರ ಪ್ರೀತಿ ವಿಶ್ವಾಸಗಳ ಪ್ರತೀಕವಾಗಿ ಕರ್ನಾಟಕ ವಿಶ್ವವಿದ್ಯಾಲಯವು ನೀಡಿದ ಗೌರವ ಡಾಕ್ಟರೇಟ್, ರಾಜ್ಯ ಸರಕಾರವು ನೀಡಿದ ರಾಜ್ಯೋತ್ಸವ ಪ್ರಶಸ್ತಿ, ರಾಜ್ಯ ಸಾಹಿತ್ಯ ಅಕಾಡಮಿಯು ನೀಡಿದ ಪ್ರಶಸ್ತಿ ನನ್ನನ್ನು ಶಬ್ದ ಮುಗ್ಧನನ್ನಾಗಿ ಮಾಡಿದೆ. ಶ್ರೀ ಜಿ. ನಾರಾಯಣರು ನನ್ನನ್ನು ರಾಜ್ಯಮಟ್ಟದಲ್ಲಿ ಸನ್ಮಾನಿಸಿ 'ಕಾವ್ಯಾನಂದ' ಎಂಬ ಅಭಿನಂದನ ಗ್ರಂಥ ಕೊಟ್ಟು, ನಲ್ವತ್ತು ಸಾವಿರ ಹಣ ಉಳಿಸಿ, 'ಕನ್ನಡ ಸಾಹಿತ್ಯ ಸಂವರ್ಧಕ ಟ್ರಸ್ಟ್' ರಚಿಸಿ ಅದಕ್ಕೆ ನನ್ನನ್ನು ಆಜೀವ ಅಧ್ಯಕ್ಷನನ್ನಾಗಿ ಮಾಡಿದ್ದಾರೆ. ಈಗ ಅದು ತನ್ನ ದಶಮಾನೋತ್ಸವವನ್ನು ಆಚರಿಸಲಿದೆ.

ಒಬ್ಬನೇ ಮಗ ಚಿ. ಪ್ರಸನ್ನಕುಮಾರ ಪುರಾಣಿಕ H.M.T. ಕೈ ಗಡಿಯಾರ ಕಾರ್ಖಾನೆಯಲ್ಲಿ ಡೆಪ್ಯುಟಿ ಜನರಲ್ ಮ್ಯಾನೇಜರ್; ಹಿರಿಯ ಮಗಳು ವಿಜಯಾ ನಂದೀಶ್ವರ, ಬಸವೇಶ್ವರ ಸಹಕಾರ ಸಂಘದ ಉಪಾಧ್ಯಕ್ಷೆ, ಬೆಂಗಳೂರು ಪಶ್ಚಿಮದ ಇನ್ನರ್ ವ್ಹೀಲ್ ಕ್ಲಬ್ಬಿನ ಅಧ್ಯಕ್ಷೆ; ಎರಡನೆಯ ಮಗಳು ಡಾ। ಗೀತಾ ಅಮೆರಿಕೆಯಲ್ಲಿ ಪತಿ ಡಾ। ಗಂಗಾಧರ ಪೂಜಾರಿಯೊಡನೆ ವಾಸವಾಗಿದ್ದು ಹೆಸರು ಗಳಿಸಿದ್ದಾಳೆ. ಮೂರನೆಯ ಮಗಳು ಚಿ. ಭಾರತಜ್ಯೋತಿ ಮೃತ್ಯುಂಜಯಪ್ಪ ಭದ್ರಾವತಿಯಲ್ಲಿ; ಅಲ್ಲಿ ಇನ್ನರ್ ವ್ಹೀಲ್ ಕ್ಲಬ್ ಅಧ್ಯಕ್ಷೆಯಾಗಿ ದುಡಿದಿದ್ದಾಳೆ, ಒಬ್ಬ ತಮ್ಮ ಅನ್ನದಾನಯ ಪುರಾಣಿಕ ಪ್ರಖ್ಯಾತ ನ್ಯಾಯವಾದಿ, 27 ವರ್ಷ 'ಬಸವ ಸಮಿತಿ'ಯ ಪ್ರಧಾನ ಕಾಯದರ್ಶಿ; ಇನ್ನೊಬ್ಬ ತಮ್ಮ ಬಸವರಾಜ ಪುರಾಣಿಕ ಬಾಗಲಕೋಟೆಯ ಬಸವೇಶ್ವರ ಇಂಜಿನಿಯರಿಂಗ್ ಕಾಲೇಜಿನ ಪ್ರಿನ್ಸಿಪಾಲ.

ಮುಂದಿನ ಜೂನ್ ತಿಂಗಳಲ್ಲಿ 75ನೆಯ ವರ್ಷದಲ್ಲಿ ಕಾಲಿರಿಸಲಿರುವ ನನ್ನ ಇಂದಿನ ಬಯಕೆಯೆಂದರೆ ಅಷ್ಟರಲ್ಲಿ ನನ್ನ ಐವತ್ತನೆಯ ಕೃತಿ ಪ್ರಕಟಿಸುವುದು ಮತ್ತು ಕನ್ನಡಕ್ಕಾಗಿ ಕೊನೆಯ ಉಸಿರಿನವರೆಗೆ ದುಡಿಯುವುದು.

●